# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 21–08–2012 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಮುನೀಂದ್ರಕುಮಾರ್.ಕೆ.ಎ – ಅಧ್ಯಕ್ಷರು | **ಕೌನ್ಸಿಲ್ ಕಾರ್ಯದರ್ಶಿ,** |
| ತೇಜಸ್ವಿನಿ ಎನ್.ರಾಜು – ಸದಸ್ಯರು | **ಜಂಟಿ ಆಯುಕ್ತರು (ಆಡಳಿತ),** |
| ಮುನಿಸ್ವಾಮಿಗೌಡ – ಸದಸ್ಯರು | **ಉಪ ಆಯುಕ್ತರು (ಆಸ್ತಿಗಳು),** |
| ಆನಂದ್. ವಿ – ಸದಸ್ಯರು | **ಉಪ ಆಯುಕ್ತರು (ಕಂದಾಯ),** |
| ಕೆ. ಉಮೇಶ್‌ಶೆಟ್ಟಿ – ಸದಸ್ಯರು | **ಜಂಟಿ ನಿರ್ದೇಶಕರು (ಸಾಂಖ್ಯಿಕ)** |
| ಕೆ. ಪೂರ್ಣಿಮ – ಸದಸ್ಯರು | **ಸಹಾಯ ಕಂದಾಯ ಅಧಿಕಾರಿ (ಪೂರ್ವ–ಮಾರುಕಟ್ಟೆ),** |
| ಗಂಗಾಂಬಿಕೆ – ಸದಸ್ಯರು | **ಸಹಾಯಕ ಅಭಿಯಂತರರು (ಯೋಜನೆ–ಪಶ್ಚಿಮ)** |
| ಕ್ವೀನ್‌ಎಲಿಜೆಬೆತ್ – ಸದಸ್ಯರು | --- |
| ನೂರ್ ಜಹಾನ್ – ಸದಸ್ಯರು | --- |
| ಟಿ.ಎ. ಗಾಯಿತ್ರಿ – ಸದಸ್ಯರು | --- |
| ಗೈರು ಹಾಜರಿದ್ದ ಸದಸ್ಯರುಗಳು | --- |
| ಸುರೇಶ್. ಹೆಚ್ – ಸದಸ್ಯರು | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/63/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಸ.ಕಂ.ಅ(ಪೂ)ಮಾ/ಪಿಆರ್/327/11–12, ದಿನಾಂಕ : 18–05–2012 ರಲ್ಲಿ ವಿವರಿಸಿರುವಂತೆ, ನೇತಾಜಿ ಸುಭಾಷ ಚಂದ್ರ ಬೋಸ್ ಕಟ್ಟಡದ (ಪಿಯುಬಿ) 2ನೇ ಅಂತಸ್ತಿನಲ್ಲಿರುವ ಶಂಕರ್‌ನಾಗ್ ಚಿತ್ರಮಂದಿರದ ಗುತ್ತಿಗೆಯನ್ನು 10ವರ್ಷಗಳ ಅವದಿಗೆ ಶೃಂಗಾರ್ ಸಿನಿಮಾಸ್ ಪ್ರೈವೇಟ್ ಲಿಮಿಟೆಡ್ (FAME) ರವರಿಗೆ ತಿಂಗಳು ಪರವಾನಗಿ ಶುಲ್ಕ ಆಧಾರದ ಮೇಲೆ ವಾರ್ಷಿಕ ಶೇ.3% ರಂತೆ ಹೆಚ್ಚಿನ ಪರಿಷ್ಕರಿಸುವ ಷರತ್ತಿಗೆ ಒಳಪಟ್ಟು ನೀಡಿ ದಿನಾಂಕ : 09–06–2007 ರಂದು ಸದರಿ ಸಂಸ್ಥೆಯವರಿಂದ ಕರಾರು ಮಾಡಿಕೊಳ್ಳಲಾಗಿರುತ್ತದೆ.

ಸದರಿ ಸಂಸ್ಥೆಯವರ ಕರಾರಿನಂತೆ ಮಾಸಿಕವಾಗಿ ಮೇ 2008 ರಿಂದ ಜುಲೈ 2008ರವರೆಗೆ ಪಾವತಿ ಮಾಡಿಕೊಂಡು ಬಂದಿರುತ್ತಾರೆ. ಆದರೆ ಆಗಸ್ಟ್ 2008 ರಿಂದ ಫೆಬ್ರವರಿ 2009ರವರೆಗೆ ಅಧಿಕ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲವೆಂದು ಪರವಾನಗಿ ಶುಲ್ಕವನ್ನು ಬಾಕಿ ಉಳಿಸಿಕೊಂಡಿರುತ್ತಾರೆ.

ಆದರೆ ಸದರಿ ಚಿತ್ರಮಂದಿರಕ್ಕೆ 145ಕೆ.ವಿ.ಎ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿದ್ದು, ಹೆಚ್ಚುವರಿಯಾಗಿ 335 ಕೆ.ವಿ.ಎ ವಿದ್ಯುತ್ ಸರಬರಾಜು ನೀಡಲು ದಿನಾಂಕ : 12–09–2007ರಂದು ಸದರಿ ಸಂಸ್ಥೆರವರು ಪತ್ರ ಸಲ್ಲಿಸಿರುತ್ತಾರೆ, ಈ ಬಗ್ಗೆ ಹೆಚ್ಚಿನ ವಿದ್ಯುತ್ ಸಂಪರ್ಕ ಕಲ್ಪಿಸಲು ಬಿಬಿಎಂಪಿ ವತಿಯಿಂದ ಬೆಸ್ಕಾಂ ಸಂಸ್ಥೆಗೆ ಬೇಡಿಕೆ ಸಲ್ಲಿಸಲಾಗಿರುತ್ತದೆ. ಅದರಂತೆ ಬೆಸ್ಕಾಂ ಸಂಸ್ಥೆಯವರು ಹಾಲಿ ಇರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಕಟ್ಟಡದ ಹೊರಗಡೆ ಸ್ಥಳಾಂತರಿಸಿ, ಕೇಬಲ್ ವಿದ್ಯುತ್ ಸಲಕರಣೆಗಳನ್ನು ಹೊಸದಾಗಿ ಅಳವಡಿಸಲು ದಿನಾಂಕ : 31–01–2008 ರಂದು ತಿಳಿಸಿರುತ್ತಾರೆ. ಅದರಂತೆ ಮೇಲಾಧಿಕಾರಿಗಳಿಂದ ಮಂಜೂರಾತಿ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸಿ ದಿನಾಂಕ : 02–03–2009 ರಲ್ಲಿ 145ಕೆ.ವಿ.ಎ ವಿದ್ಯುತ್ ಹಾಗೂ ಹೆಚ್ಚುವರಿ 355ಕೆ.ವಿ.ಎ 500ಕೆ.ವಿ.ಎ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗಿರುತ್ತದೆ.

ಆದರೆ ಸದರಿ ಸಂಸ್ಥೆರವರು ಚಿತ್ರಮಂದಿರದ ಒಳಾಂಗಣದಲ್ಲಿ ಸಮಯದಲ್ಲಿ 145ಕೆ.ವಿ.ಎ ವಿದ್ಯುತ್ ಸಂಪರ್ಕವನ್ನು ಉಪಯೋಗಿಸುತ್ತಿದ್ದರು. ಈ ಸಮಯದಲ್ಲಿ ಕರ್ನಾಟಕ ಸರ್ಕಾರ ವಿದ್ಯುತ್ ಪರಿವೀಕ್ಷಕರು ಸದರಿ ಚಿತ್ರಮಂದಿರಕ್ಕೆ ತಪಾಸಣೆ ನಡೆಸಿ ಆಂತರಿಕ ವಿದ್ಯುತ್ ಕಾಮಗಾರಿ ಬಗ್ಗೆ ಹಲವಾರು ನ್ಯೂನತೆಗಳನ್ನು ಸರಿಪಡಿಸಲು ತಿಳಿಸಿರುತ್ತಾರೆ.

ಅಂತಿಮವಾಗಿ ದಿನಾಂಕ : 20–01–2009 ರಂದು ಕರ್ನಾಟಕ ಸರ್ಕಾರ ವಿದ್ಯುತ್ ಪರಿವೀಕ್ಷಣಾಲಯ ಚಿತ್ರಮಂದಿರದ ಪ್ರದರ್ಶನಕ್ಕೆ ಅನುಮೋದನೆ ನೀಡಿರುತ್ತಾರೆ.

ಈ ಸಂದರ್ಭದಲ್ಲಿ ಆಗಸ್ಟ್ 2008 ರಿಂದ ಫೆಬ್ರವರಿ 2009ರ ಅವಧಿಯಲ್ಲಿ 145ಕೆ.ವಿ.ಎ ವಿದ್ಯುತ್ ಅನ್ನು ಸಂಪೂರ್ಣವಾಗಿ ಬಳಸಿಕೊಂಡಿರುವ ಮೇರೆಗೆ ಸದರಿ ಅವಧಿಯ ಬಾಕಿ ಪರವಾನಗಿ ಶುಲ್ಕ ರೂ.1,26,17,500.00 ಪಾವತಿಸಲು ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿ, ನಂತರ ದಿನಾಂಕ : 30–08–2010ರಲ್ಲಿ ಮನ್ನಾ ಮಾಡಲು ಬರುವುದಿಲ್ಲವೆಂದು, ಪಾವತಿಸಲು ಸೂಚಿಸಿರುತ್ತಾರೆ.

ಮುಂದುವರೆದಂತೆ ಕರಾರಿನ ಆರ್ಟಿಕಲ್ 6.1(ಎ) ರಂತೆ ಸದರಿ ಚಿತ್ರಮಂದಿರಕ್ಕೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿದ ನಂತರ ಬಾಕಿ ಪರವಾನಗಿ ಶುಲ್ಕ ಪಾವತಿಸಬೇಕಾಗಿರುತ್ತದೆಂದು ಸದರಿ ಸಂಸ್ಥೆರವರು ಬಾಕಿಯನ್ನು ಮನ್ನಾ ಮಾಡಲು ಕೋರಿರುತ್ತಾರೆ. ಆದರೆ ಆರ್ಟಿಕಲ್ 5.5(ಎ) ಮತ್ತು (ಬಿ)ರಲ್ಲಿ ಬಾಡಿಗೆದಾರರೇ ಎಲ್ಲಾ ಸೌಲಭ್ಯಗಳನ್ನು ಮಾಡಿಕೊಳ್ಳಬೇಕಾಗಿರುತ್ತದೆ. ಆದರೆ ಆಗಸ್ಟ್ 2008 ರಿಂದ ಫೆಬ್ರವರಿ 2009ರ ಅವಧಿಯಲ್ಲಿ 145 ಕೆ.ವಿ.ಎ ವಿದ್ಯುತ್ ಸರಬರಾಜನ್ನು ಸಂಪೂರ್ಣವಾಗಿ ಬಳಸಿಕೊಂಡಿದ್ದು, ಚಿತ್ರಮಂದಿರದವರ ಆಂತರಿಕ ವಿದ್ಯುತ್ ಕಾಮಗಾರಿಗಳ ಹಲವಾರು ನ್ಯೂನತೆಗಳಿಂದ ಕರ್ನಾಟಕ ಸರ್ಕಾರ ವಿದ್ಯುತ್ ಪರಿವೀಕ್ಷಕ ಇಲಾಖೆಯಿಂದ ಪರವಾನಗಿ ಪಡೆಯಲು

ವಿಳಂಬದಿಂದ ಹಾಗೂ ನವೀಕರಣ ಮಾಡಿ ಪ್ರಾಧಿಕಾರಗಳಿಂದ ಪರವಾನಗಿ ಪಡೆಯಲು ಸದರಿ ಸಂಸ್ಥೆಯವರಿಂದಲೇ ವಿಳಂಬವಾಗಿದೆಯೇ ಹೊರತು, ಬಿಬಿಎಂಪಿ ವತಿಯಿಂದ ವಿಳಂಭವಾಗಿರುವುದಿಲ್ಲ. ಆದ್ದರಿಂದ ಸದರಿ ಚಿತ್ರಮಂದಿರದವರೇ ವಿಳಂಬ ನೀತಿ ಅನುಸರಿಸಿರುವ ಮೇರೆಗೆ ಬಾಕಿ ಬರಬೇಕಾಗಿರುವ ಪರವಾನಗಿ ಶುಲ್ಕ ರೂ.1,26,17,500.00 ಗಳನ್ನು ಹಾಗೂ ಆರ್ಟಿಕಲ್ ಆಪ್ 7.1 ರಂತೆ 2% ದಂಡದೊಂದಿಗೆ ಪಾವತಿಸಬೇಕಾಗಿದ್ದು, ಈ ಬಗ್ಗೆ ಅಂತಿಮ ನೋಟಿಸ್ ಜಾರಿಗೊಳಿಸಿ ಸದರಿ ಚಿತ್ರಮಂದಿರದವರಿಂದ ಠೇವಣಿ ಮೊತ್ತ ರೂ.2,10,00,000.00ಗಳಲ್ಲಿ ಬಾಕಿ ಪರವಾನಗಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಆದೇಶ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :–** **ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು, ಹಾಗೂ ಸದರಿ ಸಂಸ್ಥೆಯವರು ಆಗಸ್ಟ್ 2008 ರಿಂದ ಮಾರ್ಚ್ 2009ರ ಅವಧಿಯಲ್ಲಿ 145 ಕೆ.ವಿ.ಎ ವಿದ್ಯುತ್ ಸರಬರಾಜನ್ನು ಸಂಪೂರ್ಣವಾಗಿ ಬಳಸಿಕೊಂಡಿರುವುದರಿಂದ ದಿ.18–05–2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಬಹುದೆಂದು ಸಮಿತಿಯು ತೀರ್ಮಾನಿಸಿತು.**

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/82/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(3ಎ)ಸಿಪಿಆರ್/47/04–05/12–13, ದಿನಾಂಕ : 28.05.2012ರಲ್ಲಿ ವಿವರಿಸಿರುವಂತೆ, ಶ್ರೀ.ಬಿ.ಶಿವಲಿಂಗಯ್ಯ, ನಿವೃತ್ತ ಉಪ ಕಾನೂನು ಅಧಿಕಾರಿರವರು ಸದರಿಯವರ ಮನವಿ ದಿನಾಂಕ : 27–12–2011 ರಂತೆ ಮನವಿ ಸಲ್ಲಿಸಿ ಪಾಲಿಕೆಯಲ್ಲಿ ಉಪ ಕಾನೂನು ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಉಪ ಕಾನೂನು ಅಧಿಕಾರಿ ಹುದ್ದೆಯ ಜೊತೆಯಲ್ಲಿ ಪಾಲಿಕೆಯ ವಿರುದ್ಧ ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗ ಮತ್ತು ಲೋಕಾಯುಕ್ತರ ಮುಂದೆ ದಾಖಲಾಗುವ ಪ್ರಕರಣಗಳನ್ನು ಸಹ ನಿರ್ವಹಿಸಿರುವುದಾಗಿ ತಿಳಿಸಿ, ಸದರಿ ಪ್ರಕರಣಗಳನ್ನು ನಿರ್ವಹಿಸಲು ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿಕೊಳ್ಳಲು ಕೋರಿರುತ್ತಾರೆ.

ಈ ಸಂಬಂಧವಾಗಿ, ಕಾನೂನು ಕೋಶದ ಮುಖ್ಯಸ್ಥರು ಕಾನೂನು ಕೋಶದ ಮುಖ್ಯಸ್ಥರ ವರದಿ ದಿನಾಂಕ : 13.01.2012ರ ವರದಿಯಲ್ಲಿ ಪ್ರಸ್ತುತ ಪಾಲಿಕೆಯ ವಿರುದ್ಧ ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗ ಮತ್ತು ಲೋಕಾಯುಕ್ತರ ಮುಂದೆ ದಾಖಲಾಗುವ ಪ್ರಕರಣಗಳು ಹೆಚ್ಚುತ್ತಿದ್ದು, ಇಂತಹ ಪ್ರಕರಣಗಳನ್ನು ನಿರ್ವಹಿಸಲು ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಒಬ್ಬರನ್ನು ನೇಮಿಸುವುದು ಅವಶ್ಯವಿರುತ್ತದೆ. ಆದ್ದರಿಂದ ಸದರಿ ಪ್ರಕರಣಗಳ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಬಿ.ಶಿವಲಿಂಗಯ್ಯ, ನಿವೃತ್ತ ಉಪ ಕಾನೂನು ಅಧಿಕಾರಿರವರಿಗೆ ಅನುಭವವಿದ್ದು ಇವರ ಅರ್ಜಿಯನ್ನು ಪರಿಗಣಿಸಿ ಗುತ್ತಿಗೆ ಆಧಾರದ ಮೇಲೆ ನೆಮಕ ಮಾಡಲು ಕೋರಿರುತ್ತಾರೆ.

ಈ ಸಂಬಂಧ ಶ್ರೀ ಬಿ. ಶಿವಲಿಂಗಯ್ಯ, ನಿವೃತ್ತ ಉಪ ಕಾನೂನು ಅಧಿಕಾರಿರವರು, 1977ರ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ನಿಯಮಾವಳಿಗಳ ನಿಯಮ 20(ಎ)ರನ್ವಯ ಪಾಲಿಕೆಯ ವಿರುದ್ಧ ದಾಖಲಾಗುವ ಕರ್ನಾಟಕ ಲೋಕಾಯುಕ್ತ ಮತ್ತು ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ನಿರ್ವಹಿಸಲು, ವೇತನ ನಿಗಧಿ ಪಡಿಸಿ

ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರದ ಅನುಮೋದನೆ ಕೋರಲು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :- ದಿನಾಂಕ : 28-05-2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಲಾಯಿತು.**

## *03]. ವಿಷಯದ ಸಂಖ್ಯೆ :-ತೆಆಸ್ಥಾಸ/89/2012-13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(6ಎ)ಪಿಆರ್/132/2011-12, ದಿನಾಂಕ : 26.06.2012 ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜು ನಿರ್ಮಾಣ ನಿಗಮ ನಿಮಿತ ಕಿರಿಯ/ ಸಹಾಯಕ ಅಭಿಯಂತರರುಗಳನ್ನು ಪಾಲಿಕೆ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದಿಂದ ಎರವಲು ಸೇವೆಯ ಮೇಲೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಜಿ. ನಾಗಭೂಷಣ್ ಮತ್ತು ಇತರೆ ಅಭಿಯಂತರರುಗಳು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ ರವರಿಗೆ ಮನವಿ ಸಲ್ಲಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವಂತೆ ಕೋರಿರುವ ಮೇರೆಗೆ ಸದರಿಯವರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ವಿಲೀನಗೊಳಿಸಲು ನಿಗಮದ ಅಭ್ಯಂತರವಿಲ್ಲವೆಂದು ಹಾಗೂ ಸದರಿಯವರುಗಳ ಮನವಿಯನ್ನು ಪರಿಗಣಿಸಲು ನಿಗಮದಿಂದ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು ರವರ ಪತ್ರ ಸಂಖ್ಯೆ : ಆಡಳಿತ-2/2007-08/ 1171, ದಿ: 17-12-2007 ಮತ್ತು 11-02-2008ರ ರೀತ್ಯಾ ಪತ್ರವನ್ನು ಬರೆಯಲಾಗಿರುತ್ತದೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಸರ್ಕಾರವು, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ನಅಇ 31 ಎಂಎನ್‌ವೈ 2008, ದಿನಾಂಕ : 11-04-2008 ಮತ್ತು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ನಅಇ 299 ಎಂಎನ್‌ವೈ 2008, ದಿನಾಂಕ : 22-07-2008 ಪತ್ರಗಳಲ್ಲಿ ಈ ಕೆಳಕಂಡ ಅಭಿಯಂತರರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ವಿಲೀನಗೊಳಿಸುವ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಅಭಿಪ್ರಾಯ ವರದಿಯನ್ನು ಕಳುಹಿಸಿಕೊಡಲು ಕೋರಿರುತ್ತಾರೆ.

1. ಶ್ರೀ ಆರ್.ಟಿ. ಸುರೇಶ್‌ಬಾಬು. ಸಹಾಯಕ ಅಭಿಯಂತರರು
2. ಶ್ರೀ. ಜಿ. ನಾಗಭೂಷಣ್, ಸಹಾಯಕ ಅಭಿಯಂತರರು
3. ಶ್ರೀ. ಆರ್. ಬೆನಕೇಶ್, ಸಹಾಯಕ ಅಭಿಯಂತರರು
4. ಶ್ರೀ. ಹೆಚ್.ಎಂ. ತಿಮ್ಮಪ್ಪ, ಕಿರಿಯ ಅಭಿಯಂತರರು
5. ಶ್ರೀ. ಕೆ.ಜಿ ಸುಂದರೇಶ್. ಕಿರಿಯ ಅಭಿಯಂತರರು
6. ಶ್ರೀ. ಎಸ್.ಎಲ್. ಅಶ್ವಥ್. ಸಹಾಯಕ ಅಭಿಯಂತರರು
7. ಶ್ರೀ. ಎಸ್. ವಿಶ್ವನಾಥ್, ಸಹಾಯಕ ಅಭಿಯಂತರರು
8. ಶ್ರೀ. ಬಿ. ರಮೇಶ್, ಕಿರಿಯ ಅಭಿಯಂತರರು
9. ಶ್ರೀ ರವೀಂದ್ರನಾಥ್. ಸಹಾಯಕ ಅಭಿಯಂತರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಹಾಯಕ/ಕಿರಿಯ ಅಭಿಯಂತರರುಗಳ ಕೊರತೆ ಇದ್ದು, ಕರ್ನಾಟಕ ನಿರ್ಮಾಣ ನಿಗಮ ನಿಯಮಿತದ ಅಭಿಯಂತರರುಗಳನ್ನು ಪೊಲೀಸ್ ಹೌಸಿಂಗ್ ಕಾರ್ಪೋರೇಷನ್ ಹಾಗೂ ಇತರೆ ಇಲಾಖೆಗಳಲ್ಲಿ ವಿಲೀನಗೊಳಿಸಿರುವುದರಿಂದ ಹಾಗೂ ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕರ್ನಾಟಕ ನಿರ್ಮಾಣ ನಿಗಮ ನಿಯಮಿತದಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ

ನಿಯಮಾವಳಿಯಲ್ಲಿ ವಿಲೀನಗೊಳಿಸಲು ಅವಕಾಶವಿಲ್ಲದೇ ಇರುವುದರಿಂದ ಈ ಕೆಳಕಂಡ ಷರತ್ತುಗೊಳಪಡಿಸಿ, ಸಾರ್ವಜನಿಕ ಹಾಗೂ ಪಾಲಿಕೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ನಿಯಮವನ್ನು ಸಡಿಲಿಸಿ, ಪಾಲಿಕೆಯ ನೇರ ನೇಮಕಾತಿ ಹುದ್ದೆಗಳಿಗೆ ಸದರಿಯವರುಗಳ ಸೇವೆಯನ್ನು ವಿಲೀನಗೊಳಿಸುವ ಬಗ್ಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಮಾನ್ಯ ಆಡಳಿತರಾರರ ಟಿಪ್ಪಣಿ ದಿನಾಂಕ : 25-10-2008ರ ರೀತ್ಯಾ ಮಾನ್ಯ ಆಡಳಿತಗಾರರು ಆದೇಶಿಸಿದ್ದು, ಇದರಂತೆ ಈ ಕಛೇರಿ ಪತ್ರ ಸಂಖ್ಯೆ : ಬಿ12(6)/ಪಿಆರ್/772/2008-09, ದಿ: 01-12-2008ರ ರೀತ್ಯಾ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

(ಶ್ರೀ.ಆರ್.ಟಿ. ಸುರೇಶ್ ಬಾಬು, ಸಹಾಯಕ ಅಭಿಯಂತರರು, ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲವಾದ್ದರಿಂದ ಅವರ ಹೆಸರನ್ನು ಕೈಬಿಡಲಾಗಿರುತ್ತದೆ)

**ಷರತ್ತುಗಳು:**

1. ಸದರಿ ಅಭಿಯಂತರರುಗಳ ಸೇವಾ ಜೇಷ್ಠತೆಯನ್ನು ಹಾಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ/ಕಿರಿಯ ಅಭಿಯಂತರರುಗಳ ಸೇವಾ ಜೇಷ್ಠತೆಗಿಂತ ಕಿರಿಯರನ್ನಾಗಿ ಪರಿಗಣಿಸುವುದು.
2. ಸೇವಾ ಹಿರಿತನ ಹಾಗೂ ಮುಂಬಡ್ತಿ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ದಾವೆಯನ್ನು ಹೂಡತಕ್ಕದ್ದಲ್ಲ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ, ಸರ್ಕಾರವು ದಿ: 01–06–2011 ರಂದು ಕರಡು ನಿಯಮಗಳನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ, ಸದರಿ ಕರಡು ನಿಯಮಗಳಿಗೆ ನಿಗಧಿತ ಅವಧಿಯಲ್ಲಿ ಸ್ವೀಕರಿಸುವ ಆಕ್ಷೇಪಣೆ/ಸಲಹೆಗಳನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ನಅಇ 31 ಎಂಎನ್‌ವೈ 2008, ದಿನಾಂಕ : 04–06–2011ರಲ್ಲಿ ಕೋರಲಾಗಿರುತ್ತದೆ.

ಇದರಂತೆ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 8 ಮಂದಿ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸ್ವೀಕರಿಸಲಾಗಿರುವ ಈ ಕೆಳಕಂಡವರುಗಳ ಆಕ್ಷೇಪಣೆಗಳನ್ನು ಸರ್ಕಾರಕ್ಕೆ ಈ ಕಛೇರಿಯ ಸಮಸಂಖ್ಯೆಯ ಸುತ್ತೋಲೆ ದಿನಾಂಕ : 30–06–2012ರ ಪತ್ರದಲ್ಲಿ ಕಳುಹಿಸಿಕೊಡಲಾಗಿರುತ್ತದೆ.

| ಕ್ರ ಸಂ | ಆಕ್ಷೇಪಣೆದಾರರ ಹೆಸರು | ವಿಳಾಸ |
|---|---|---|
| 1 | ಶ್ರೀ. ಎಂ ಉದಯಶಂಕರ್ | ವಿರೋಧ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 2 | ಅಧ್ಯಕ್ಷರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ ಹಾಗೂ ನೌಕರರ ಕೇಂದ್ರೀಯ ಸಂಘ (ನೋಂ) |
| 3 | ಶ್ರೀ ಸಿ.ಎಂ ಮಂಜುನಾಥ್ | ನಂ. 48, 15ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು–96 |
| 4 | ಶ್ರೀ. ಎಂ.ಟಿ. ಬಾಲಾಜಿ ಮತ್ತು ಇತರೇ ಸಹಾಯಕ ಅಭಿಯಂತರರು | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಹಾಯಕ/ ಕಿರಿಯ ಅಬಿಯಂತರರುಗಳು |
| 5 | ಶ್ರೀ.ಎಸ್. ವೆಂಕಟರತ್ನಯ್ಯ | ನಂ. 48, 1ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಗೌಡನಹಳ್ಳಿ, ಬೆಂಗಳೂರು. |

ಸರ್ಕಾರವು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ 8 ಮಂದಿ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ ಸ್ವೀಕರಿಸಲಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸರ್ಕಾರವು ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ : ಯುಡಿಡಿ 31 ಎಂಎನ್‌ವೈ 2008, ದಿನಾಂಕ : 31.10.2011ರ ಅಧಿಸೂಚನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ

ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿದ್ದು ಸದರಿ ಅಧಿಸೂಚನೆಯು ಈ ಕೆಳಕಂಡಂತೆ ಇರುತ್ತದೆ.

" Whereas, the draft of the Karnataka Municipal Corporations (Absorption of Assistant Engineers/Junior Engineers appointed on deputation basis in Bruhat Bangalore Mahanagara Palike(Special) Rules, 2011 which the Government of Karnataka proposes to make in exercise of the powers conferred by sub-section (1) of section 91 read with section 421 of the Karnataka Municipal Corporations Act. 1976 (Karnataka Act 14 of 1977 was published in Notification No. UDD 31 MNY 2008, dated 1st June 2011, in part IV-A of the Karnataka Gazette, Extra-ordinary, dated 2nd June 2011inviting objections and suggestions from the persons likely to be affected thereby within fifteen days from the date of its publication in the Official Gazette.

Whereas, the said Gazette was made available to the public on 2nd June 2011.

And whereas, the objections and suggestions were received in respect of the said draft rules have been examined by the Government.

Now therefore in exercise of the powers conferred by Section 421 of the Karnataka Municipal Corporations Act, 1976 (Karnataka Act 14 of 1977) the Government of Karnataka hereby makes the following rules, namely:

## RULES

1. **Title and commencement:** (1) These rules may be called the Karnataka Municipal Corporations (Absorption of Assistant Engineers/Junior Engineers appointed on deputation basis in Bruhat Bangalore Mahanagara Palike (Special) Rules 2011.

   (2)They Shall come into force from the date of their publication in the Official Gazette.

2. **Defintions:** (1) In these rules, unless the context otherwise requires, "Deputation Assistant Engineers/Junior Engineers" means an Assistant Engineer or Junior Engineer as the case may be appointed in the Bruhat Bangalore Mahanagara Palike on deputation basis and has served for not less than three years in the Karnataka State construction Corporation limited.

   (2) Other works and expression used in these rules but not defined shall have the same meaning respectively assigned to them in the Karnataka Municipal Corporations Rules 1977.

3. **Absorption of Deputation Assistant Engineer or Junior Engineer in the Bruhat Bangalore Mahanagara Palike-**

Notwithstanding anything contained in the Karnataka Municipal Corporations Rules., 1977 or any other rules made or deemed to have been made under the provisions of the Karnataka Municipal Corporations Act, 1976 (Karnataka Act 14 of 1977), governing the method or recruitment of the employees of the Bruhat

Bangalore Mahanagara Palike every Deputation Assistant Engineer or Junior Engineer as Specified in Column (2) of the Schedule and continues as such in the Bruhat Bangalore Mahanagara Palike on the date of commencement of these rules, be absorbed in the corresponding category of post and scale of pay specified in Columns (4) and (5) respectively in the Bruhat Bangalore Mahanagara Palike Services. Provided that no such person shall be absorbed.

(i) If he was disqualified for appointment under the Karnataka Municipal Corporations Rules, 1977 on the date of appointment as Assistant Engineer or Junior Engineer in the Karnataka State Construction Corporation Limited;

(ii) If he does not possess the minimum academic qualification if any specified in the rules of recruitment applicable for the recruitment to the post in which he is absorbed.

(iii) In any post reserved for the persons belonging to the category of Schedule castes or Scheduled Tribes or other backward classes to which he was appointed as deputation Junior Engineer or Assistant Engineer as the case may be if he is found to be not belonging to such category, Otherwise such posts shall be treated as backlog to be filled by process of Special recruitment from among these classes.

3. **Pay, Pension Leave and Seniority of persons absorbed under these rules:** Notwithstanding anything contained in the Karnataka Municipal Corporations Rules 1977.

(i) The initial basic pay of deputations Assistant Engineer or Junior Engineer as the case may be absorbed under these rules shall be fixed at the minimum of the pay scale applicable to the category of post to which he is absorbed under rule 3.

(ii) The services rendered by a person on deputation Assistant Engineer or Junior Engineer as the case may be prior to the date of absorption shall count for the purpose of leave pension, but not for pay and seniority and grant of selection time scale of pay under Karnataka Civil Services (Time Bound Advancement) Rules. 1983 or grant of selection time scale of pay under the Karnataka Civil Services (Automatic grant of special promotion to the senior scale of pay) Rules, 1991 and additional increment for having completed twenty years of service in the single cadre.

**SCHEDULE**
**(NOTIFICATION NO.UDD 31 MNY 2008 DATED: 31-10-2011)**
**(See Rule-3)**

| Sl. No. | Name of the Deputation Engineers | Designation | Post in which absorbed | Scale of pay of the post in which absorbed (Rs) |
|---|---|---|---|---|
| 1. | Sri. G. Nagabhushana | Assistant Engineer | Assistant Engineer | 11400-21600 |
| 2 | Sri. R. Benakesha | Assistant Engineer | Assistant Engineer | 11400-21600 |
| 3 | Sri. S.L. Ashwath | Assistant Engineer | Assistant Engineer | 11400-21600 |
| 4 | Sri. S. Vishwanath | Assistant Engineer | Assistant Engineer | 11400-21600 |
| 5 | Sri. H. Ravindranath | Assistant Engineer | Assistant Engineer | 11400-21600 |
| 6 | Sri. H.M. Thimmappa | Junior Engineer | Junior Engineer | 8825-16000 |
| 7 | Sri. K.G. Sundaresh | Junior Engineer | Junior Engineer | 8825-16000 |
| 8 | Sri. B. Ramesh | Junior Engineer | Junior Engineer | 8825-16000 |

ಶ್ರೀ. ಜಿ. ನಾಗಭೂಷಣ್ ಮತ್ತು ಇತರೆ ಅಭಿಯಂತರರು ಸರ್ಕಾರದ ಅಧಿಸೂಚನೆಯೊಂದಿಗೆ ಶ್ರೀ ನಾಗಭೂಷಣ್ ಮತ್ತು ಇತರರ ಮನವಿ ಪತ್ರ ದಿನಾಂಕ : 15–11–2011ರ ರೀತ್ಯಾ ಮನವಿ ಸಲ್ಲಿಸಿ, ಕರ್ನಾಟಕ ರಾಜ್ಯ ನಿರ್ಮಾಣ ನಿಗಮವನ್ನು ಸರ್ಕಾರದಿಂದ ಮುಚ್ಚಲು ಆದೇಶವಾಗಿರುವ ಹಿನ್ನೆಲೆಯಲ್ಲಿ ನಮ್ಮಗಳ ಸೇವೆಯನ್ನು ಪಾಲಿಕೆಯಲ್ಲಿ ಕ್ರಮಬದ್ಧಗೊಳಿಸಲು ಕೋರಿರುತ್ತಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಯುಡಿಡಿ 31 ಎಂಎನ್‌ವೈ 2008 ದಿ:31–10–2011ನ್ನು ಪಾಲಿಕೆಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ಈ ಕಛೇರಿಯ ಸಮಸಂಖ್ಯೆಯ ಟಿಪ್ಪಣಿ ದಿನಾಂಕ : 08–03–2012ರಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ : ಸಿಆಸುಸ್ಥಾನ/31/2011–12, ದಿನಾಂಕ : 17.03.2012ರಲ್ಲಿ ಒಪ್ಪಿರುತ್ತಾರೆ.

ಆದ್ದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ನಿರ್ಮಾಣ ನಿಯಮಿತದ ಸಹಾಯಕ/ಕಿರಿಯ ಅಭಿಯಂತರರುಗಳನ್ನು ಪಾಲಿಕೆಯ ಸೇವೆಯಲ್ಲಿ ವಿಲೀನಗೊಳಿಸಿರುವ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ಯುಡಿಡಿ 31 ಎಂಎನ್‌ವೈ 2008 ದಿ:31–10–2011ನ್ನು ಪಾಲಿಕೆಯಲ್ಲಿ ಅನುಷ್ಠಾನಗೊಳಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಡಳಿತ) ರವರು ನೀಡಿದ ಅಭಿಪ್ರಾಯವನ್ನು ಒಪ್ಪಿ ಆಯುಕ್ತರ ದಿ.26–06–2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/94/2012–13*

ಅಪರ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 30.06.2012 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ–17 ಜೆ.ಪಿ.ಪಾರ್ಕ್‌ನಲ್ಲಿ ಈಜುಕೊಳ ನಿರ್ಮಿಸಲು ರೂ.489=00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಅಗತ್ಯ ಅನುಮೋದನೆಗಳೊಂದಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿರುತ್ತದೆ. ಕಾಮಗಾರಿಗೆ ಟೆಂಡರ್ ಅನ್ನು

ಆಹ್ವಾನಿಸಲಾಗಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಗುತ್ತಿಗೆದಾರರು ರೂ.515=22 ಲಕ್ಷಗಳಿಗೆ ಸದರಿ ಕಾಮಗಾರಿಯನ್ನು ನಿರ್ವಹಿಸಲು ಕೋರಿದ್ದು ಈ ಸಂಬಂಧ ಘನ ಸರ್ಕಾರದಿಂದ ಅನುಮೋದನೆ ದೊರೆತಿರುತ್ತದೆ. ಕಾಮಗಾರಿಯನ್ನು ಪ್ರಾರಂಭಿಸಿ ಪೂರ್ಣಗೊಳಿಸಿದ್ದು ಸಾರ್ವಜನಿಕ ಉಪಯೋಗಕ್ಕೆ ಬಿಟ್ಟುಕೊಡಲಾಗಿದೆ ಅಂತಿಮವಾಗಿ ಕಾಮಗಾರಿಯನ್ನು ರೂ.499=99 ಲಕ್ಷಗಳಲ್ಲಿ ಪೂರ್ಣಗೊಳಿಸಿದ್ದು ಮೂಲ ಅಂದಾಜು ಪಟ್ಟಿಗೆ ಹೋಲಿಸಿದಾಗ ರೂ.10=99 ಲಕ್ಷಗಳು ಹೆಚ್ಚುವರಿಯಾಗಿರುತ್ತದೆ. ಕಾಮಗಾರಿ ನಿರ್ವಹಿಸುವಾಗ ಕೆಲವೊಂದು ಅಂಶಗಳ ಪರಿಮಾಣಗಳು ಜಾಸ್ತಿಯಾಗಿದುದ್ದರಿಂದ ವರ್ಕ್ ಸ್ಲಿಪ್ ತಯಾರಿಸಿದ್ದು ಅದರ ಮೊತ್ತವು ರೂ.10=49 ಲಕ್ಷಗಳಾಗಿರುತ್ತದೆ. ಅದರಂತೆ ಪರಿಷ್ಕೃತ ಅಂದಾಜು ಮೊತ್ತವು ರೂ.499=99 ಲಕ್ಷಗಳಾಗಿದ್ದು ಮಂಜೂರಾದ ಅಂದಾಜು ಮೊತ್ತಕ್ಕಿಂತ ರೂ.10.=99 ಲಕ್ಷಗಳು ಜಾಸ್ತಿಯಾಗಿರುತ್ತದೆ.

ಆದುದರಿಂದ ಮಂಜೂರಾದ ಅಂದಾಜು ಮೊತ್ತಕ್ಕಿಂತ ರೂ.10=99 ಲಕ್ಷಗಳು ಜಾಸ್ತಿಯಾಗಿರುವುದರಿಂದ ರೂ.499=99 ಲಕ್ಷಗಳ ಪರಿಷ್ಕೃತ ಅಂದಾಜಿಗೆ ಅನುಮೋದನೆ ನೀಡಲು ಹಾಗೂ ಮೂಲ ಅಂದಾಜಿಗಿಂತ ಹೆಚ್ಚುವರಿಯಾಗಿರುವ ರೂ.10=99 ಲಕ್ಷಗಳನ್ನು 2012–13ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

| SL. No. | Name ofthe Work | Revised Est.Cost (in Lakhs) |
|---|---|---|
| 01 | Construction of Swimmingpool at J.P.Park Ward No-17 | 499.99 |

**ನಿರ್ಣಯ :– ಅಪರ ಆಯುಕ್ತರು (ಯೋಜನೆ) ರವರ ದಿ. 30–06–2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## ***<u>05]. ವಿಷಯದ ಸಂಖ್ಯೆ :–ತೆಆಸ್ಥಾಸ/95/2012–13</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಉಆ(ಕಂ)ಪಿಆರ್/1658/10–11, ದಿನಾಂಕ : 09.07.2012 ರಲ್ಲಿ ವಿವರಿಸಿರುವಂತೆ, ಕರ್ನಾಟಕ ಪೌರ ನಿಗಮಗಳ ಕಾಯ್ದೆ ಕಲಂ 108 (ಎ) (16) ರ ಅನುಸಾರ ಪ್ರದೇಶವಾರು ಯೂನಿಟ್ ದರದ ಆಧಾರದ ಮೇಲೆ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯನ್ನು ದಿನಾಂಕ : 01–04–2008 ರಿಂದ ಜಾರಿಗೆ ತರಲಾಗಿರುವುದು ಸರಿಯಷ್ಟೆ.

ಸದರಿ ಕಾಯ್ದೆ ಅನ್ವಯ ಪ್ರತಿ ಮೂರು ವರ್ಷಗಳಿಗೊಮ್ಮೆ ಕನಿಷ್ಠ ಶೇಕಡ 15 ರಷ್ಟು ಹಾಗೂ ಗರಿಷ್ಠ ಶೇಕಡ 30 ರಷ್ಟು ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಪ್ರಸ್ತುತ ಜಾರಿಯಲ್ಲಿರುವ ಆಸ್ತಿ ತೆರಿಗೆ ಬ್ಲಾಕ್ ಪದ್ಧತಿಯ ದಿನಾಂಕ : 31.03.2011ಕ್ಕೆ ಮೂರು ವರ್ಷಗಳ ಅವಧಿಯು ಮುಕ್ತಾಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ವಸತಿ ಉಪಯೋಗದ ಸ್ವತ್ತುಗಳಿಗೆ ಶೇಕಡ 20ರಂತೆ ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇಕಡ 25ರಂತೆ ದರಗಳನ್ನು ಪರಿಸ್ಕರಿಸುವಲ್ಲಿ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ದಿನಾಂಕ : 18.03.2011 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯದ ಸಂಖ್ಯೆ : 266/2010–11 ರಲ್ಲಿ ಈ ಕೆಳಕಂಡಂತೆ ನಿರ್ಣಯಿಸಿರುತ್ತಾರೆ.

> "ಕೆ.ಎಂ.ಸಿ ಕಾಯ್ದೆ 108 (ಎ) (16) ರ ಅನುಸಾರ ಪ್ರತಿ ಮೂರು ವರ್ಷಕೊಮ್ಮೆ ಕನಿಷ್ಟ ಶೇಕಡ 15 ರಷ್ಟು ಹಾಗೂ ಗರಿಷ್ಟ ಶೇಕಡ 30 ರಷ್ಟು ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲು ಪಾಲಿಕೆಗೆ ಅವಕಾಶ ಕಲ್ಪಿಸಲಾಗಿದೆ. ಕಾಯ್ದೆ ಪ್ರಕಾರ ಎಸ್.ಎ.ಎಸ್ ಪದ್ಧತಿಯನ್ನು 2008–2009ನೇ ಸಾಲಿನಲ್ಲಿ ಜಾರಿಗೆ ತಂದಿದ್ದು, ಈ ಬ್ಲಾಕ್ ಅವಧಿಯು ದಿನಾಂಕ : 01.04.2011 ರಿಂದ ಪ್ರಾರಂಭಗೊಳ್ಳಲಿರುವುದರಿಂದ ಕಾಯ್ದೆ ಪ್ರಕಾರ ವಸತಿ ಉಪಯೋಗದ ಆಸ್ತಿಗಳಿಗೆ ಶೇಕಡ 20 ರಷ್ಟನ್ನು ವಸತಿಯೇತರ ಕಟ್ಟಡಗಳಿಗೆ ಶೇಕಡ 25 ರಷ್ಟನ್ನು ದಿನಾಂಕ : 01.04.2011 ರಿಂದ ಪರಿಷ್ಕರಣೆ ಮಾಡಲು ಆಯುಕ್ತರು ದಿನಾಂಕ : 11.03.2011 ರಂದು ಟಿಪ್ಪಣಿ ಮಂಡಿಸಿರುತ್ತಾರೆ.
>
> ಸಾರ್ವಜನಿಕರು, ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಜನಪ್ರತಿನಿಧಿಗಳು ಮುಂದುವರೆದ ಬ್ಲಾಕ್ ಅವಧಿಯಲ್ಲಿ ಆಸ್ತಿ ತೆರಿಗೆಯಲ್ಲಿ ಯಾವುದೇ ಪರಿಷ್ಕರಣೆ ಮಾಡಬಾರದೆಂದು ಒತ್ತಾಯಿಸಿರುತ್ತಾರೆ.
>
> ಈ ಬ್ಲಾಕ್ ಅವಧಿಯಲ್ಲಿ ಶೇಕಡ 3 ರಷ್ಟನ್ನು ಕಟ್ಟಡ ಸವಕಳಿಗಾಗಿ ನಿಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ : 01.04.2008 ರಿಂದ ಪ್ರಾರಂಭವಾದ ಈಗಿರುವ ಬ್ಲಾಕ್ ಅವಧಿಯನ್ನು 3 ವರ್ಷಗಳಿಂದ 5 ವರ್ಷಗಳಿಗೆ ಹೆಚ್ಚಿಸಿ, ಅಂದರೆ ಮುಂದಿನ ಎರಡು ವರ್ಷಗಳಿಗೆ (ದಿನಾಂಕ : 01.04.2011 ದಿಂದ 30.03.2013ಕ್ಕೆ) ಹಾಲಿ ಇರುವ

ದರವನ್ನೇ ವಸತಿ ಮತ್ತು ವಸತಿಯೇತರ ಕಟ್ಟಡಗಳಿಗೆ ಮುಂದುವರೆಸಲು ಹಾಗೂ ಯಾವುದೇ ಕಟ್ಟಡದ ವಯಸ್ಸಿನ ಸವಕಳಿಯನ್ನು ಈ ಮುಂದುವರೆದ ಅವಧಿಗೆ ವಿಸ್ತರಿಸದಿರಲು ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ, ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ಸರ್ಕಾರವನ್ನು ಕೋರುವ ಬಗ್ಗೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.''

ಮೇಲ್ಕಂಡ ನಗರ ಪಾಲಿಕೆಯ ನಿರ್ಣಯಕ್ಕೆ ಸೂಕ್ತ ತಿದ್ದುಪಡಿ ತರಲು ಸರ್ಕಾರದ ಅನುಮೋದನೆ ಪಡೆಯಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಈ ಸಂಬಂಧ ಸರ್ಕಾರವು ತನ್ನ ಪತ್ರದ ಸಂಖ್ಯೆ : ನಇ 2016 ಎಂಎನ್‌ಯು 2011 ದಿನಾಂಕ : 10.11.2011 ರಲ್ಲಿ ಕೆಲವೊಂದು ಮಾಹಿತಿಗಳನ್ನು ಕೋರಲಾಗಿದ್ದು, ನಗರ ಪಾಲಿಕೆಯು ಸದರಿ ಕಾಯ್ದೆಗೆ ಸೂಕ್ತ ತಿದ್ದುಪಡಿ ತರಲು ದಿನಾಂಕ : 25.01.2012 ರಂದು ಸರ್ಕಾರಕ್ಕೆ ಮಹಿತಿಗಳನ್ನು ಸಲ್ಲಿಸಲಾಗಿರುತ್ತದೆ. ಈ ಸಂಬಂಧ ತಹಲ್‌ವರೆವಿಗೂ ಸರ್ಕಾರದಿಂದ ಯಾವುದೇ ಮಾಹಿತಿ : ತಿದ್ದುಪಡಿ ಆದೇಶ ಬಂದಿರುವುದಿಲ್ಲ. ಹಾಗೂ ಮಹಾಲೇಖಪಾಲಕರು ಕರ್ನಾಟಕ (ಕೇಂದ್ರ ಸರ್ಕಾರ) ರವರು ಆಸ್ತಿ ತೆರಿಗೆ ಪರಿಷ್ಕರಣೆ ಮಾಡಲು ಕಾಯ್ದೆಯಲ್ಲಿ ಅವಕಾಶವಿದ್ದರೂ ಸಹ ನಗರ ಪಾಲಿಕೆಯು ಈ ಸಂಬಂಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಆಡಿಟ್ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ.

ಮುಂದುವರೆದಂತೆ 2008-2009ನೇ ಸಾಲಿನಲ್ಲಿ ತರಲಾಗಿರುವ ಆಸ್ತಿ ತೆರಿಗೆ ದರವು ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯು 2000ನೇ ಸಾಲಿನಲ್ಲಿ ಸ್ವಯಂ ಘೋಷಣೆ ಆಸ್ತಿ ತೆರಿಗೆ ಪದ್ಧತಿ ಅಡಿಯಲ್ಲಿ ನಿಗಧಿಪಡಿಸಲಾಗಿರುವ ದರಗಳನ್ನೇ ಪ್ರಸ್ತುತ ನಿಗಧಿಪಡಿಸಲಾಗಿದ್ದು ಅಂದಿನಿಂದ ಇಂದಿನವರೆಗೂ ದರಗಳು ಪರಿಷ್ಕರಣೆ ಆಗಿರುವುದಿಲ್ಲ. ಪ್ರಸ್ತುತ ಜಾರಿಯಲ್ಲಿರುವ ಸ್ವಯಂ ಘೋಷಣಾ ಆಸ್ತಿ ತೆರಿಗೆ ಪದ್ಧತಿಯು ದಿನಾಂಕ : 31.03.2011ಕ್ಕೆ ಮೂರು ವರ್ಷಗಳ ಅವದಿಗೆ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು ದಿನಾಂಕ : 01.04.2001 ರಿಂದಲೇ ಜಾರಿಗೆ ತರಬೇಕಾಗಿದೆ. ಈ ಪರಿಷ್ಕರಣೆಯು ಮುಂದಿನ 3 ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ. ಕಾಯ್ದೆಯಲ್ಲಿ ಶೇಕಡ 15 ರಿಂದ 30 ರವರೆಗೆ ಆಸ್ತಿ ತೆರಿಗೆ ದರವನ್ನು ಪರಿಷ್ಕರಣೆ ಮಾಡಬೇಕಾಗಿರುವುದರಿಂದ ಮತ್ತು ದಿನಾಂಕ : 01.04.2011 ರಿಂದಲೇ ಮತ್ತೆ ಕಟ್ಟಡ ಇಳುವರಿ ನೀಡಬೇಕಾಗಿರುವುದರಿಂದ ಪ್ರಸ್ತುತ ಜಾರಿಯಲ್ಲಿರುವ ದರಗಳ ಮೇಲೆ ವಸತಿ ಸ್ವತ್ತುಗಳಿಗೆ ಶೇಕಡ 20ರಂತೆ ಮತ್ತು ವಸತಿಯೇತರ ಸ್ವತ್ತುಗಳಿಗೆ ಶೇಕಡ 25ರಂತೆ ದರಗಳನ್ನು ಪರಿಷ್ಕರಿಸಿ ದಿನಾಂಕ : 01.04.2011 ರಿಂದ ಜಾರಿಗೊಳಿಸಬೇಕಾಗಿರುತ್ತದೆ.

ಮೇಲಿನ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಈಗಾಗಲೇ ನಗರ ಪಾಲಿಕೆಯು ತೀರ್ಮಾನಿಸಿದಂತೆ 3 ವರ್ಷಗಳ ಅವಧಿಯಿಂದ 5 ವರ್ಷಗಳ ಅವಧಿಗೆ ಆಸ್ತಿ ತೆರಿಗೆ ದರಗಳ ಪರಿಷ್ಕರಣೆ ಸಂಬಂಧ ಸರ್ಕಾರದಿಂದ ಯಾವುದೇ ತಿದ್ದುಪಡಿ ಆದೇಶ ಹೊರಡಿಸದೆ ಇರುವ ಹಿನ್ನಲೆಯಲ್ಲಿ ಕರ್ನಾಟಕ ಪೌರ ನಿಗಮಗಳ ಕಾಯ್ದೆ 1976 ಕಲಂ 108(ಎ) (16)ರ ಅನುಸಾರ ಮೇಲ್ಕಂಡಂತೆ ಆಸ್ತಿ ತೆರಿಗೆ ದರಗಳ ಪರಿಷ್ಕರಣೆಯನ್ನು ಬೃಹತ್ ಬೆಂಗಳೂರು ಮಹನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ ಜಾರಿಗೆ ತರುವ ಈ ಪ್ರಸ್ತಾವನೆಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಟಿಪ್ಪಣಿಯನ್ನು ಮಂಡಿಸಿದೆ.

**ನಿರ್ಣಯ :-** **ಆಯುಕ್ತರ ದಿ. 09-07-2012 ರ ಆಯುಕ್ತರ ಟಿಪ್ಪಣಿಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು, ಹಾಲಿ ಇರುವ ವಲಯಗಳ ವರ್ಗೀಕರಣವನ್ನು ಪರಿಷ್ಕರಿಸುವ ಅವಶ್ಯಕತೆ ಇರುವುದರಿಂದ ಪ್ರಸ್ತಾವನೆಯನ್ನು ಪರಿಷ್ಕರಿಸಿ ಕಡತವನ್ನು ಮರು ಮಂಡಿಸಲು ಸಮಿತಿಯು ತೀರ್ಮಾನಿಸಿತು.**

## ***061. ವಿಷಯದ ಸಂಖ್ಯೆ :-ತೆಆಸ್ಥಾಸ/96/2012-13***

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(1ಜಿ)ಪಿಆರ್/49/2012-13, ದಿನಾಂಕ : 23.06.2012 ರಲ್ಲಿ ವಿವರಿಸಿರುವಂತೆ, ಶ್ರೀ ಕೆ. ನಾಗರಾಜು, ನಿವೃತ್ತ ತಹಶೀಲ್ದಾರ್, ಇವರನ್ನು ಈ ಕಛೇರಿಯ ಸುತ್ತೋಲೆ ಸಂಖ್ಯೆ:12(1ಜಿ)ಪಿಆರ್/109/06-07, ದಿನಾಂಕ : 01.06.2009ರ ಸುತ್ತೋಲೆಯನ್ವಯ ಜಂಟಿ ಆಯುಕ್ತರು (ಯಲಹಂಕ) ರವರ ಕಛೇರಿ ಆದೇಶ ಸಂಖ್ಯೆ : ಬೃಬೆಂ.ಮ.ಪಾ/ಯ.ವ/ಇಎಸ್‌ಟಿ/ಪಿಆರ್/469/09-10, ದಿನಾಂಕ:01.12.2009, ಆದೇಶದಂತೆ ಯಲಹಂಕ ವಲಯದಲ್ಲಿ 1 ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಮಾಸಿಕ ರೂ.10,000/- ಮತ್ತು ಇತರೇ ಭತ್ಯೆಗಳು ರೂ.2500/- ಸೇರಿ ಒಟ್ಟು ರೂ.12,500/- ಗೌರವಧನ ನಿಗಧಿಪಡಿಸಿ ನಿಯೋಜಿಸಿಕೊಳ್ಳಲಾಗಿರುತ್ತದೆ. ನಂತರ ಸದರಿಯವರ ಸೇವಾ ಅವಧಿಯು 1 ವರ್ಷ ಮುಗಿದ ನಂತರ ಆಯುಕ್ತರವರ ಆದೇಶದ ಮೇರೆಗೆ ದಿನಾಂಕ : 01.12.2010 ರಿಂದ ದಿನಾಂಕ : 31.05.2011 ರವರೆಗೆ ಅವಧಿಯನ್ನು ವಿಸ್ತರಿಸಲಾಗಿರುತ್ತದೆ.

ಮುಂದುವರೆದಂತೆ, ಜಂಟಿ ಆಯುಕ್ತರು (ಯಲಹಂಕ) ರವರ ವರದಿ ದಿನಾಂಕ : 20.06.2011 ಮತ್ತು ದಿನಾಂಕ : 26.04.2011ರಲ್ಲಿ ಯಲಹಂಕ ಕಛೇರಿಯ ಆಡಳಿತ್ಮಾತಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ಪರಿಶಿಷ್ಟ ಜಾತಿ ಸಮೀಕ್ಷೆಯ ಕೆಲಸ, ಕೊಳಚೆ ಪ್ರದೇಶ ಹಾಗು ನಿರಾಶ್ರಿತ ಪುನರ್ವಸತಿಗೆ ಸಂಬಂಧಪಟ್ಟಂತೆ ಕೆಲಸ ಕಾರ್ಯಗಳು ಬಾಕಿ ಇರುವ ಹಿನ್ನೆಲೆಯಲ್ಲಿ ಸದರಿಯವರ ಸೇವೆಯನ್ನು ದಿನಾಂಕ : 01.06.2011 ರಿಂದ 31.12.2011ರವರೆಗೆ ಮುಂದುವರೆಸಬೇಕೆಂದು ಹಾಗೂ ಮುಂದುವರೆಸುವ ಕುರಿತು ಕೇಂದ್ರ ಕಛೇರಿಯ ಆದೇಶವನ್ನು ನಿರೀಕ್ಷಿಸಿ ಯಲಹಂಕ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಸೂಚಿಸಿ, ಸದರಿಯವರ ಸೇವೆಯನ್ನು ದಿನಾಂಕ : 01.06.2011 ರಿಂದ ದಿನಾಂಕ : 31.12.2011ರವರೆಗೆ ಮುಂದುವರೆಸಲು ಹಾಗೂ ಜಂಟಿ ಆಯುಕ್ತರು (ಯಲಹಂಕ) ರವರ ವರದಿ ದಿನಾಂಕ : 22.07.2011ರ ವರದಿಯಲ್ಲಿ ಕೇಂದ್ರ ಕಛೇರಿಯ ಆದೇಶ ನಿರೀಕ್ಷಿಸಿ ಸದರಿಯವರನ್ನು ಮುಂದುವರೆಸಿರುವ ಸೇವಾ ಅವಧಿಯು ಸಹ ದಿನಾಂಕ : 31.12.2011ಕ್ಕೆ ಮುಕ್ತಾಯವಾಗಿರುವುದರಿಂದ, ಸದರಿ ಅವಧಿಯಲ್ಲಿ ಅಂದರೆ ಜೂನ್–2011 ರಿಂದ ಮಾರ್ಚ್–2012ರವರೆಗೂ ಪ್ರತಿ ಮಾಹೆ ರೂ.12,500/– ರಂತೆ ಒಟ್ಟು ರೂ.1,25,000/–ಗಳ ಗೌರವಧನ ಪಾವತಿಸದೇ ಬಾಕಿಯಿದ್ದು ಹಾಗೂ ಸದರಿಯವರು ಯಲಹಂಕ ವಲಯ ವ್ಯಾಪ್ತಿಯಲ್ಲಿ 50 ಸ್ಲಂಗಳ ಉಸ್ತುವಾರಿ, ಹಾಗೂ ಚುನಾವಣಾ ಮತದಾರರ ಪಟ್ಟಿಯ ಪರಿಸ್ಕರಣೆ ಕಾರ್ಯದ ಉಸ್ತುವಾರಿ ಕಾರ್ಯ ನಿರ್ವಹಿಸುತ್ತಿರುವುದರಿಂದ ಸದರಿಯವರಿಗೆ ಪಾವತಿಸಲು ಬಾಕಿ ರೂ.1,25,000/–ಗಳನ್ನು ಮಂಜೂರು ಮಾಡಲು ಅನುಮತಿ ಹಾಗೂ ಮುಂದಿನ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ ಅನುಮೋದನೆಯನ್ನು ಕೋರಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಶ್ರೀ ನಾಗರಾಜು, ನಿವೃತ್ತ ತಹಶೀಲ್ದಾರ್ ರವರು ಯಲಹಂಕ ವಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಿದ ಅವಧಿ ದಿನಾಂಕ : 01.06.2011 ರಿಂದ ದಿನಾಂಕ : 31.12.2011ರವರೆಗೆ ಮುಂದುವರೆಸಿರುವ ಬಗ್ಗೆ ಅನುಮೋದನೆ ಹಾಗೂ ಸದರಿಯವರು ಸೇವೆಯನ್ನು ಮತ್ತೊಂದು ವರ್ಷದವರೆಗೆ ವಿಸ್ತರಿಸುವ ಬಗ್ಗೆ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ಆಯುಕ್ತರ ದಿ. 23–06–2012ರ ಟಿಪ್ಪಣಿಯನ್ನು ಒಪ್ಪಿದೆ.**

## *07]. ವಿಷಯದ ಸಂಖ್ಯೆ :–ತೆಆಸ್ಥಾಸ/97/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ದಿನಾಂಕ : 19.07.2012 ರಲ್ಲಿ ವಿವರಿಸಿರುವಂತೆ, 2011–12ನೇ ಸಾಲಿನ ಆಯವ್ಯಯ ತಯಾರಿಕೆಯಲ್ಲಿ ಈ ಕೆಳಕಂಡ ಅಧಿಕಾರಿ ಮತ್ತು ನೌಕರರು ಭಾಗಿಯಾಗಿದ್ದು ಮೂಲವೇತನದ ಶೇ.50 ರಷ್ಟು ಸಂಭಾವನೆ ನೀಡಲು ಅನುಮೋದನೆಗೆ ಟಿಪ್ಪಣಿ ಮಂಡಿಸಲಾಗಿದೆ.

| ಕ್ರಸಂ | ಅಧಿಕಾರಿ/ನೌಕರರ ಹೆಸರು | ಹುದ್ದೆ | ಮೂಲ ವೇತನದ ಶೇ.50 ರಷ್ಟು ಮೊತ್ತ |
|---|---|---|---|
| 1. | ಶ್ರೀಮತಿ. ಬಿ.ಶೈಲಜ | ಶೀಘ್ರಲಿಪಿಗಾರ್ತಿ | 4200.00 |
| 2. | ಶ್ರೀ. ನಾಗರಾಜು | ಪ್ರ.ದ.ಸ | 3872.50 |
| 3. | ಶ್ರೀ. ಗಂಗಾಧರಯ್ಯ | ವಾ.ಚಾಲಕರು | 4025.00 |
| 4. | ಶ್ರೀ. ದರ್ಮರಾಯ | ಧಫೇದಾರ್ | 3900.00 |
| 5. | ಶ್ರೀ. ಕೃಷ್ಣ ಜಿ | ಜವಾನರು | 3072.50 |
| | | **ಒಟ್ಟು** | **19070.00** |

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ ಒಟ್ಟು ರೂ.19070.00 ಗಳನ್ನು 2011–12ನೇ ಸಾಲಿನ ಆಯವ್ಯಯ ತಯಾರಿಕೆ ಸಂಬಂಧ ಅಧಿಕಾರಿ/ನೌಕರರಿಗೆ ಸಂಭಾವನೆಯಾಗಿ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :– ವಿಶೇಷ ಆಯುಕ್ತರು (ಯೋಜನೆ ರವರ ದಿ. 19–07–2012ರ ಟಿಪ್ಪಣಿಯನ್ನು ಒಪ್ಪಲಾಯಿತು.**

## 08]. ವಿಷಯದ ಸಂಖ್ಯೆ :-ತೆಆಸ್ಥಾಸ/98/2012-13

ಅಪರ ಆಯುಕ್ತರು (ಆಡಳಿತ) ರವರ ಟಿಪ್ಪಣಿ ಸಂಖ್ಯೆ : ಜೆ.ಡಿ.ಎಸ್/ಪಿಆರ್/32/11-12, ದಿನಾಂಕ : 21.07.2012ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ 37 ಜನನ/ಮರಣ ನೊಂದಣಿ ಕೇಂದ್ರಗಳು, 6 ರೆಫರಲ್ ಆಸ್ಪತ್ರೆಗಳು ಹಾಗೂ 5 ಆಯ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ನೋಂದಾಯಿಸುವ ಘಟನೆಗಳಿಗೆ ಸಂಬಂಧಿಸಿದಂತೆ, ಹಾಗೂ ಬಿ-1 ಕೇಂದ್ರಗಳಲ್ಲಿ ಪ್ರಮಾಣ ಪತ್ರ ವಿತರಿಸಲು, ಅವಶ್ಯವಿರುವ ಜನನ/ಮರಣ ಪ್ರಮಾಣ ಪತ್ರಗಳ ನಮೂನೆಗಳು ಮತ್ತು ತತ್ಸಂಬಂಧ ಅವಶ್ಯವಿರುವ ಅರ್ಜಿ ನಮೂನೆ, ಹೆಸರು ಸೇರ್ಪಡೆ ಅರ್ಜಿ ಮುಂತಾದವುಗಳನ್ನು ಮುದ್ರಿಸುವ ಅವಶ್ಯಕತೆ ಇರುತ್ತದೆ. ಇ-ಟೆಂಡರ್ ಮೂಲಕ ಟೆಂಡರ್ ಕರೆದು ದರಗಳನ್ನು ನಿಗಧಿಪಡಿಸಿ ಮುದ್ರಿಸಲು ಮಾನ್ಯ ಆಯುಕ್ತರವರಿಂದ ಅನುಮೋದನೆ ಪಡೆಯಲಾಗಿದೆ ಹಾಗೂ ಅವಶ್ಯವಿರುವ ಟೆಂಡರ್ ಡಾಕ್ಯೂಮೆಂಟನ್ನು ಸಹ ಸಿದ್ದಪಡಿಸಲಾಗಿದೆ. ಈ ಕೆಳಗೆ ನಮೂದು ಮಾಡಿರುವ ಸಂಖ್ಯೆಗಳಲ್ಲಿ ನಮೂನೆಗಳನ್ನು ಮುದ್ರಿಸುವ ಅವಶ್ಯಕತೆ ಇರುತ್ತದೆ.

1. ಜನನ ಪ್ರಮಾಣ ಪತ್ರ ನಮೂನೆಗಳ 25 ಲಕ್ಷ ಪ್ರತಿಗಳು.
2. ಮರಣ ಪ್ರಮಾಣ ಪತ್ರ ನಮೂನೆಗಳ 15 ಲಕ್ಷ ಪ್ರತಿಗಳು.
3. ಜನನ ಪ್ರಮಾಣ ಪತ್ರ ಕೋರಿ ಸಲ್ಲಿಸಲು ಅರ್ಜಿ ನಮೂನೆಗಳು 15 ಲಕ್ಷ ಪ್ರತಿಗಳು.
4. ಮರಣ ಪ್ರಮಾಣ ಪತ್ರ ಕೋರಿ ಸಲ್ಲಿಸಲು ಅರ್ಜಿ ನಮೂನೆಗಳು 10 ಲಕ್ಷ ಪ್ರತಿಗಳು.
5. ಹೆಸರು ಸೇರ್ಪಡೆ ಕೋರಿ ಸಲ್ಲಿಸುವ ಅರ್ಜಿ ನಮೂನೆ 10 ಲಕ್ಷ ಪ್ರತಿಗಳು.

ಮೇಲೆ ನಮೂದು ಮಾಡಿರುವ ನಮೂನೆಗಳನ್ನು ಮುದ್ರಿಸುವ ವಿಚಾರದಲ್ಲಿ ಇ-ಟೆಂಡರ್ ಕರೆಯಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಹೆಚ್ಚಿನ ಮಾಹಿತಿಗಾಗಿ ಮುಂದೂಡಲಾಯಿತು-**

## 09]. ವಿಷಯದ ಸಂಖ್ಯೆ :-ತೆಆಸ್ಥಾಸ/99/2012-13

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/07/11-12, ದಿನಾಂಕ: 09-05-2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ.64, ಚನ್ನಕೃಷ್ಣಪ್ಪ ಲೇನ್‌ನಲ್ಲಿರುವ ನಗರ ಪಾಲಿಕೆ ಕಟ್ಟಡದಲ್ಲಿ ಒಂದು ಅಂತಸ್ತು ಖಾಲಿ ಇದ್ದು, ಇದರ ವಿಸ್ತೀರ್ಣ 504.70 ಚದರ ಅಡಿಗಳಿದ್ದು, ಇದನ್ನು ಸಾರ್ವಜನಿಕ ಅನುಕೂಲಕ್ಕಾಗಿ ಅಂಚೆ ಕಛೇರಿ ತೆರೆಯಲು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಬೇಕೆಂದು ಅಂಚೆ ಇಲಾಖೆಯ ಹಿರಿಯ ಅಧಿಕಾರಿಗಳು ಕೋರಿರುತ್ತಾರೆ.

ಪ್ರಸ್ತುತ ಖಾಲಿ ಇರುವ ಜಾಗವನ್ನು ಅಳತೆ ಮಾಡಲಾಗಿ 504.70 ಚದರ ಅಡಿಗಳಿರುತ್ತದೆ. ಇದನ್ನು ತಿಂಗಳ ಬಾಡಿಗೆ ಆಧಾರದ ಮೇಲೆ ಸಾರ್ವಜನಿಕ ಹಿತದೃಷ್ಟಿಯಿಂದ ಅಂಚೆ ಕಛೇರಿ ತೆರೆಯಲು ಸದರಿ ಇಲಾಖೆಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡಬಹುದೆಂದು ವಲಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 504.70 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21-09-2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.1600/- ಗಳಿರುತ್ತದೆ. ಇದಕ್ಕೆ ಶೇ 20% ರಷ್ಟು ಹೆಚ್ಚಿಸಿದಾಗ 1920/- ಇದರಂತೆ ಲೆಕ್ಕಾಚಾರ ಮಾಡಲಾಗಿ, 504.70X1920=969024/-ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ96,902/- ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.8075/- ಗಳಾಗುತ್ತದೆ.

<u>ಸರ್ಕಾರದ ಆದೇಶ ಸಂ:ನಅಇ 129 ಟಿಎಂಡಿ 2002, ಬೆಂಗಳೂರು, ದಿನಾಂಕ:02-06-2003 (ಇ) ರಲ್ಲಿ</u>

iii) ಈ ಕೆಳಕಂಡ ಸಂಸ್ಥೆಗಳಿಗೆ ಜಮೀನು ಮಂಜೂರಾತಿಯ ಮಾರುಕಟ್ಟೆ ದರದಲ್ಲಿ ಶೇ 50% ರಿಯಾಯಿತಿ ಇರುತ್ತದೆ.

ಇ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಮಂಡಳಿಗಳಿಗೆ/ಪಾಲಿಕೆಗಳಿಗೆ ಕಛೇರಿಗಳ/ ಮಾರುಕಟ್ಟೆಗಳ/ ಬಸ್ ನಿಲ್ದಾಣಗಳ/ವಿದ್ಯುತ್ ಮಂಡಳಿಗಳ, ಮತ್ತಿತರ ಸಾರ್ವಜನಿಕ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ಎಂಬುದಾಗಿರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಮಾಸಿಕ ಗುತ್ತಿಗೆ ಮೊತ್ತ ರೂ.8075/- ನಿಗದಿಪಡಿಸಿ ಅಂಚೆ ಇಲಾಖೆಗೆ ಗುತ್ತಿಗೆ ನೀಡುವ ಬಗ್ಗೆ ನಗರ ಯೋಜನೆ ಹಾಗೂ ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ನಗರ ಪಾಲಿಕೆ ಸಭೆಯ ಅನುಮೋದನೆ ಪಡೆಯಲು ಮಂಡಿಸಲಾದ ಟಿಪ್ಪಣಿ ಮೇರೆಗೆ, '3' ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿ,

ಮಾನ್ಯ ವಿಶೇಷ ಆಯುಕ್ತರ ದಿನಾಂಕ: 09–05–2012ರ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಅಂಚೆ ಇಲಾಖೆಗೆ ಗುತ್ತಿಗೆ ನೀಡುವ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17.07.2012ರ ನಿರ್ಣಯ.

**ನಿರ್ಣಯ :-** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ.17-07-2012ರ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.5000/- (ರೂ. ಐದು ಸಾವಿರ ಮಾತ್ರ) ಗಳ ಬಾಡಿಗೆಯನ್ನು ನಿಗಧಿಪಡಿಸಲು ಸಮಿತಿಯು ತೀರ್ಮಾನಿಸಿತು.**

## *10]. ವಿಷಯದ ಸಂಖ್ಯೆ :–ತೆಆಸ್ಥಾಸ/100/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/51/11–12, ದಿನಾಂಕ: 23–05–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.64 (5), ರಾಜಮಹಲ್ ಗುಟ್ಟಹಳ್ಳಿ, 11ನೇ ಅಡ್ಡರಸ್ತೆ, ವೈಯಾಲಿಕಾವಲ್ ಮಲ್ಲೇಶ್ವರಂ, ಸ್ವತ್ತಿನ ಸಂಖ್ಯೆ:2 ರಲ್ಲಿ ಈ ಹಿಂದೆ ಶ್ರೀ ವಿನಾಯಕ ಹೌಸಿಂಗ್ ಸೊಸೈಟಿ ರವರಿಗೆ ಸುಮಾರು 58X58 ಅಡಿಗಳ ಖಾಲಿ ಜಾಗವನ್ನು 30 ವರ್ಷಗಳಿಗೆ ಗುತ್ತಿಗೆಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ:26–08–2006ಕ್ಕೆ ಮುಗಿದಿದ್ದು, ಕೆಪಿಪಿ ಕಾಯ್ದೆ 4 (1) ಮತ್ತು 5 (1) ಅಡಿಯಲ್ಲಿ ಅಗತ್ಯ ಕ್ರಮ ತೆಗೆದುಕೊಂಡು ನಂತರ 28–06–2011 ರಂದು ಸದರಿ ಕಟ್ಟಡವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶಕ್ಕೆ ತೆಗೆದುಕೊಳ್ಳಲಾಗಿರುತ್ತದೆ.

ಶ್ರೀ ವಿನಾಯಕ ಹೌಸಿಂಗ್ ಸೊಸೈಟಿ ರವರು ಸದರಿ ಸ್ವತ್ತಿನಲ್ಲಿ ನೆಲ ಹಾಗೂ 1ನೇ ಅಂತಸ್ತಿನ ಕಟ್ಟಡವನ್ನು ಈ ಹಿಂದೆ ನಿರ್ಮಿಸಿದ್ದು, ಸದರಿ ಕಟ್ಟಡವನ್ನು ಉಪ ನಿರ್ದೇಶಕರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಬಾಡಿಗೆಗೆ ನೀಡಿರುತ್ತಾರೆ. ಅವರಿಂದ ಬಾಡಿಗೆಯನ್ನು ಪಡೆಯುತ್ತಿದ್ದು, ಈಗ ಸದರಿ ಕಟ್ಟಡವು ನಗರ ಪಾಲಿಕೆ ವಶಕ್ಕೆ ಬಂದಿರುವುದರಿಂದ ಸದರಿ ಇಲಾಖೆಯಿಂದ ಬಾಡಿಗೆಯನ್ನು ಪಡೆಯಬೇಕಾಗಿರುವುದರಿಂದ ಉಪ ನಿರ್ದೇಶಕರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಸದರಿ ಕಟ್ಟಡವನ್ನು ಗುತ್ತಿಗೆ ಆಧಾರದ ಮೇಲೆ ನೀಡಬಹುದಾಗಿದೆ ಹಾಗೂ ಇಲಾಖೆಯವರು ಸಾರ್ವಜನಿಕರಿಗೆ ಉಪಯೋಗವಾಗುವುದರಿಂದ ಪಾಲಿಕೆ ಕಟ್ಟಡವನ್ನು ಉಪ ನಿರ್ದೇಶಕರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯವರಿಗೆ ದಿನಾಂಕ:01–07–2011 ರಿಂದ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಬಹುದು ಎಂದು ವಲಯಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ವಿಶೇಷ ಆಯುಕ್ತರು (ಯೋಜನೆ) ಇವರ ವರದಿಯಂತೆ ನಗರ ಪಾಲಿಕೆಯ ಪ್ರಸ್ತುತ ಆಸ್ತಿಯು ಸ್ವಂತ ಉಪಯೋಗಕ್ಕೆ ಅಗತ್ಯವಿಲ್ಲವೆಂದು ಕಂಡು ಬಂದಲ್ಲಿ ಈ ಅಸ್ತಿಯನ್ನು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಹಾಲಿ ಮಾರುಕಟ್ಟೆ ದರದಲ್ಲಿ ಮಾರಾಟ ಮಾಡಿ ಬಂದ ಹಣವನ್ನು ಒಂದು “Corpus Fund” ರಚಿಸಿ ಶೀರ್ಷಿಕೆಯಲ್ಲಿ ಜಮಾ ಮಾಡುವ ಬಗ್ಗೆ ನಗರ ಪಾಲಿಕೆಯ ಸಭೆಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಬಹುದು. ಪಾಲಿಕೆಯ ಸಭೆಯಲ್ಲಿ ಅನುಮೋದನೆ ದೊರೆತಲ್ಲಿ ಸರ್ಕಾರಕ್ಕೆ ಒಂದು ವಿವರವಾದ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದ ನಂತರ ಇಂತಹ ಆಸ್ತಿಗಳನ್ನು ಪಟ್ಟಿಮಾಡಿ ಸಾರ್ವಜನಿಕ ಬಹಿರಂಗ ಹರಾಜು ಮೂಲಕ ವಿಲೇಮಾಡಿ ಸದರೀ ನಿಧಿಯನ್ನು ವೃದ್ಧಿಪಡಿಸಬಹುದು. ಈ ನಿಧಿಯಲ್ಲಿರುವ ಹಣವನ್ನು ಪಾಲಿಕೆಯ ದೈನಂದಿನ ವೆಚ್ಚಗಳಿಗೆ ಉಪಯೋಗ ಮಾಡದೆ ಶಾಶ್ವತ ನಿಧಿಯನ್ನಾಗಿ ಪರಿವರ್ತಿಸಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟು ಈ ಠೇವಣಿಯಿಂದ ಬರುವ ಬಡ್ಡಿಯನ್ನು ಪಾಲಿಕೆಯ ಅಗತ್ಯ ವೆಚ್ಚಗಳಿಗೆ ಉಪಯೋಗಿಸಬಹುದು ಎಂಬುದಾಗಿ ಅಭಿಪ್ರಾಯಿಸಲಾಗಿರುವುದನ್ನು ಸಹಾ ಗಮನಿಸಬಹುದಾಗಿದೆ

ಪ್ರಸ್ತುತ ಜಾಗದ ವಿಸ್ತೀರ್ಣವು 58X58=3364 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ.3700/– ಗಳಿರುತ್ತದೆ. ಇದಕ್ಕೆ ಶೇ 20% ರಷ್ಟು ಹೆಚ್ಚಿಸಿದಾಗ ರೂ.4440/– ಆಗುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 3364X4440=1,49,36,160/–ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ.14,93,616/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ.1,24,468/– ಗಳಾಗುತ್ತದೆ.

<u>ಸರ್ಕಾರದ ಆದೇಶ ಸಂ:ನಅಇ 129 ಟಿಎಂಡಿ 2002, ಬೆಂಗಳೂರು, ದಿನಾಂಕ:02–06–2003 (ಇ) ರಲ್ಲಿ</u>

iii) ಈ ಕೆಳಕಂಡ ಸಂಸ್ಥೆಗಳಿಗೆ ಜಮೀನು ಮಂಜೂರಾತಿಯ ಮಾರುಕಟ್ಟೆ ದರದಲ್ಲಿ ಶೇ 50% ರಿಯಾಯಿತಿ ಇರುತ್ತದೆ.

ಇ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಮಂಡಳಿಗಳಿಗೆ/ಪಾಲಿಕೆಗಳಿಗೆ ಕಛೇರಿಗಳ/ಮಾರುಕಟ್ಟೆಗಳ/ ಬಸ್ ನಿಲ್ದಾಣಗಳ/ವಿದ್ಯುತ್ ಮಂಡಳಿಗಳ, ಮತ್ತಿತರ ಸಾರ್ವಜನಿಕ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ಎಂಬುದಾಗಿರುತ್ತದೆ.

ಈ ಮೇಲ್ಕಂಡ ವರದಿಗಳ ಹಿನ್ನೆಲೆಯಲ್ಲಿ ಪ್ರದೇಶದ ಮಾರುಕಟ್ಟೆ ಬೆಲೆ ರೂ.1,49,36,160/– ಒಟ್ಟು ಮೊತ್ತಗಳಾಗುತ್ತದೆ. ಇದರಂತೆ, ಉಪ ನಿರ್ದೇಶಕರು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗೆ ಕಂಡಿಕೆ 3 ರಲ್ಲಿ ನಮೋದಿಸಿರುವಂತೆ ಮಾರಾಟ ಮಾಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ನಗರ ಪಾಲಿಕೆ ಸಭೆಯ ಅನುಮೋದನೆ ಪಡೆಯಲು ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 23–05–2012ರ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಪ್ರಸ್ತಾವನೆಯಲ್ಲಿ ನಮೂದಿಸಲಾಗಿರುವ ದಿನಾಂಕ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರಕ್ಕೆ ಕಡಿಮೆಯಾಗದಂತೆ ಈ ಸ್ವತ್ತನ್ನು ಬಹಿರಂಗವಾಗಿ ಹರಾಜು ಮಾಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17–07–2012ರ ನಿರ್ಣಯ.

**ನಿರ್ಣಯ :– ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ. 17–07–2012ರ ನಿರ್ಣಯವನ್ನು ಮಾರ್ಪಡಿಸಿ, ಸದರಿ ಸ್ವತ್ತನ್ನು ಐದು ವರ್ಷಗಳ ಅವಧಿಗೆ ಮಾಸಿಕ ರೂ. 75,000/- (ರೂ. ಎಪ್ಪತ್ತೈದು ಸಾವಿರ ಮಾತ್ರ) ಬಾಡಿಗೆ ನಿಗಧಿಪಡಿಸಿ ನೀಡಲು ಸಮಿತಿಯು ತೀರ್ಮಾನಿಸಿತು.**

## *11]. ವಿಷಯದ ಸಂಖ್ಯೆ :–ತೆಆಸ್ಥಾಸ/101/2012–13*

ವಿಶೇಷ ಆಯುಕ್ತರು (ಯೋಜನೆ) ರವರ ಟಿಪ್ಪಣಿ ಸಂಖ್ಯೆ :ಎ3(1)/ಪಿಆರ್/27/12–13, ದಿನಾಂಕ: 11–06–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ: 127ರ ಮೂಡಲಪಾಳ್ಯ ವಾರ್ಡ್ ಕಛೇರಿಯ ಪಕ್ಕದಲ್ಲಿರುವ ಸುಮಾರು 500 ಚದರಡಿಗಳ ನಗರ ಪಾಲಿಕೆಯ ಖಾಲಿ ಕಟ್ಟಡವನ್ನು ವಾರ್ಷಿಕ ಬಾಡಿಗೆ ಆಧಾರದ ಮೇಲೆ ಅಂಚೆ ಕಛೇರಿ ತೆರೆಯಲು ಅನುಮತಿ ನೀಡಬೇಕೆಂದು ಮಾನ್ಯ ನಗರ ಪಾಲಿಕೆ ಸದಸ್ಯರು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಉಪ ಆಯುಕ್ತರು (ಪಶ್ಚಿಮ) ಮತ್ತು ವಲಯದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಚಂದ್ರಾಲೇಔಟ್) ಮತ್ತು ಕಾರ್ಯನಿರ್ವಾಹಕ ಅಭಿಯಂತರರು (ಗೋವಿಂದರಾಜನಗರ) ರವರು ಸದರಿ ಸ್ಥಳವನ್ನು ಪರಿಶೀಲಿಸಿ ನಗರ ಪಾಲಿಕೆಯ 500 ಚದರಡಿ ಖಾಲಿ ಇರುವ ಕಟ್ಟಡವನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಅಂಚೆ ಕಛೇರಿಗೆ ರೂ. 3000/– ರಂತೆ ವಾರ್ಷಿಕ ಬಾಡಿಗೆ ನಿಗಧಿಪಡಿಸಿ ಸದರಿ ಇಲಾಖೆಗೆ ನೀಡಬಹುದೆಂದು ವಲಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 500 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿ:21–09–2011ರ ಸರ್ಕಾರದ ಮಾರ್ಗಸೂಚಿ ಅನ್ವಯ ಮಾರುಕಟ್ಟೆ ದರದಂತೆ ಚದರ ಅಡಿ ಒಂದಕ್ಕೆ ರೂ. 1300/–ಗಳಿರುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 500*1300=650000/–ರೂ. ಒಟ್ಟು ಮೊತ್ತಗಳಾಗುತ್ತದೆ. ಶೇ 10% ರಂತೆ ವಾರ್ಷಿಕ ಗುತ್ತಿಗೆ ಮೊತ್ತ ರೂ. 65000/– ಗಳಾಗಲಿದ್ದು, ಮಾಸಿಕ ಗುತ್ತಿಗೆ ಮೊತ್ತ ರೂ. 5416/– ಗಳಾಗುತ್ತದೆ.

<u>ಸರ್ಕಾರದ ಆದೇಶ ಸಂ:ನಅಇ 129 ಟಿಎಂಡಿ 2002, ಬೆಂಗಳೂರು, ದಿನಾಂಕ:02–06–2003 (ಇ) ರಲ್ಲಿ</u> ಈ ಕೆಳಕಂಡ ಸಂಸ್ಥೆಗಳಿಗೆ ಜಮೀನು ಮಂಜೂರಾತಿಯ ಮಾರುಕಟ್ಟೆ ದರದಲ್ಲಿ ಶೇ 50% ರಿಯಾಯಿತಿ ಇರುತ್ತದೆ.

ಇ) ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಮಂಡಳಿಗಳಿಗೆ / ಪಾಲಿಕೆಗಳಿಗೆ / ಕಛೇರಿಗಳ / ಮಾರುಕಟ್ಟೆಗಳ / ಬಸ್ ನಿಲ್ದಾಣಗಳ / ವಿದ್ಯುತ್ ಮಂಡಳಿಗಳ, ಮತ್ತಿತರ ಸಾರ್ವಜನಿಕ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ ಎಂಬುದಾಗಿರುತ್ತದೆ.

ಈ ಮೇಲಿನ ಹಿನ್ನೆಲೆಯಲ್ಲಿ ಮಾಸಿಕ ಗುತ್ತಿಗೆ ಮೊತ್ತ. ರೂ. 5416/– ನಿಗದಿಪಡಿಸಿ ಅಂಚೆ ಇಲಾಖೆಗೆ ಗುತ್ತಿಗೆ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ನಗರ ಪಾಲಿಕೆ ಸಭೆಯ ಅನುಮೋದನೆ ಪಡೆಯಲು ಮಂಡಿಸಲಾದ ಟಿಪ್ಪಣಿ ಮೇರೆಗೆ, '3' ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿ,

ಮಾನ್ಯ ವಿಶೇಷ ಆಯುಕ್ತರ ದಿನಾಂಕ: 11–06–2012ರ ಪ್ರಸ್ತಾವನೆಯನ್ನು ಪರಿಶೀಲಿಸಿ, ಅಂಚೆ ಕಛೇರಿ ತೆರೆಯಲು ಅನುಮತಿ ನೀಡಲು ತೀರ್ಮಾನಿಸಲಾಗಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ : 17.07.2012ರ ನಿರ್ಣಯ.

**ನಿರ್ಣಯ :–** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ (ದಿ. 17–07–2012) ಮತ್ತು ಸಾರ್ವಜನಿಕ ಹಿದೃಷ್ಟಿಯಿಂದ ಅಂಚೆ ಕಛೇರಿಯು ಅತ್ಯಾವಶ್ಯಕವಾಗಿರುವುದರಿಂದ ವಾರ್ಷಿಕ ( ರೂ. ಮೂರು ಸಾವಿರ) ರೂ. 3000/- ಬಾಡಿಗೆ ನಿಗಧಿಪಡಿಸಿ ನೀಡಲು ಸಮಿತಿಯು ತೀರ್ಮಾನಿಸಿತು.**

## *12]. ವಿಷಯದ ಸಂಖ್ಯೆ :–ತೆಆಸ್ಥಾಸ/102/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/78/11–12, ದಿನಾಂಕ: 29–05–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್–119, ಪೈಲ್ವಾನ್ ಕೃಷ್ಣಪ್ಪ ರಸ್ತೆಯಲ್ಲಿ 5300 ಚ.ಅಡಿ ಪಾಲಿಕೆ ನಿವೇಶನವನ್ನು ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರೀಯ) ಸಂಘ ರವರಿಗೆ ನಗರ ಯೋಜನೆ ಮತ್ತು ಅಭಿವೃದ್ದಿ ಸ್ಥಾಯಿ ಸಮಿತಿ ರವರ ದಿನಾಂಕ: 18.10.2011ರ ವಿಷಯದ ಸಂಖ್ಯೆ: ನಯೋಅಸ್ಥಾಸ/108/11–12ರಲ್ಲಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ: 07–12–2011ರ ವಿಷಯ ಸಂಖ್ಯೆ: ತೆಆಸ್ಥಾಸ/35911–12ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಪಾಲಿಕೆ ಸಭೆಯ ದಿನಾಂಕ 27–12–2011ರ ವಿಷಯದ ಸಂಖ್ಯೆ: 31 (271)2011–12 ರಲ್ಲಿ ಮಾಸಿಕ 10000/–ರೂ. ಗುತ್ತಿಗೆ ಹಣ ನಿಗಧಿಪಡಿಸಿ 5 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವುದು ಸರಿಯಷ್ಟೆ.

ಮಾನ್ಯ ಮಾಜಿ ಉಪ ಮಹಾಪೌರರಾದ ಶ್ರೀ. ಎಸ್. ಹರೀಶ್ ರವರು ಪತ್ರವನ್ನು ಸಲ್ಲಿಸಿ, ಕರಗ ಭವನ ನಿರ್ಮಿಸುವ ಪ್ರದೇಶ ಒಟ್ಟು 5300 ಚದರಡಿಗಳ ಖಾಲಿ ಜಾಗದಲ್ಲಿ 2586 ಚದರಡಿಗಳ ಜಾಗದಲ್ಲಿ ಕಸ ಸಂಗ್ರಹಣೆ ಮಾಡುತ್ತಿದ್ದು, ಒಟ್ಟು 5300 ಚದರಡಿಗಳಲ್ಲಿ 2586 ಚದರಡಿಗಳನ್ನು ಹೊರತುಪಡಿಸಿ ಉಳಿದ 2714 ಚದರ ಅಡಿ ಜಾಗವನ್ನು ಗುತ್ತಿಗೆ ನೀಡಬಹುದೆಂದು ಹಾಗೂ ಗುತ್ತಿಗೆ ನೀಡಲಾಗಿರುವ ಪ್ರದೇಶವನ್ನು ಕರಗಭವನ ನಿರ್ಮಾಣ ಹೊರತುಪಡಿಸಿ, ಬೇರೆ ಯಾವುದೇ ವಾಣಿಜ್ಯ ವ್ಯವಹಾರಗಳಿಗೆ ಉಪಯೋಗಿಸಬಾರದೆಂದು ಷರತ್ತನ್ನು ಅಳವಡಿಸಿ ಕರಾರರು ಪತ್ರವನ್ನು ಮಾಡಿಕೊಡಲು ತಿಳಿಸಿರುತ್ತಾರೆ.

ಆದುದರಿಂದ, ಸದರಿ ಜಾಗದಲ್ಲಿ ಲಭ್ಯವಿರುವ 5300 ಚದರ ಅಡಿಗಳ ಜಾಗದ ವಿಸ್ತೀರ್ಣದಲ್ಲಿ 2586 ಚದರ ಅಡಿಗಳನ್ನು ಹೊರತುಪಡಿಸಿ ಉಳಿಕೆ 2714 ಚದರ ಅಡಿಗಳನ್ನು ಕರಗಭವನ ನಿರ್ಮಾಣಕ್ಕಾಗಿ ಮಾತ್ರ ಸೀಮಿತಗೊಳಿಸುವುದು ಹಾಗೂ ಇತರೆ ವಾಣಿಜ್ಯ ಚಟುವಟಿಕೆಗಳಿಗೆ ಉಪಯೋಗಿಸಬಾರದೆಂಬ ಷರತ್ತು ಅಳವಡಿಸಿ ಗುತ್ತಿಗೆಗೆ ನೀಡಬಹುದೆಂದು ಅಭಿಪ್ರಾಯಿಸಲಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 21–09–2011ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ. 4200/– ಗಳಿದ್ದು, ಪ್ರಸ್ತುತ ಜಾಗವು 2714 ಚ. ಅಡಿಗಳಾಗಿದ್ದು, ಇದರಂತೆ 2714*4200=1,13,98,800/–ರೂಗಳಾಗುತ್ತದೆ. ಸರ್ಕಾರಿ ಮಾರ್ಗಸೂಚಿಯಂತೆ ವಾಣಿಜ್ಯ ಉದ್ದೇಶಕ್ಕೆ ಶೇಕಡ 40ರಷ್ಟು +ಮೂಲೆ ನಿವೇಶನಕ್ಕೆ ಶೇಕಡ 10 ರಷ್ಟು ಹೆಚ್ಚಿಸಿ ಲೆಕ್ಕಾಚಾರ ಮಾಡಿದಾಗ ರೂ. 1,70,98,200/– ಗಳಷ್ಟು ಮೊತ್ತ ಆಗುತ್ತದೆ. ಶೇ:10ರಷ್ಟು ವಾರ್ಷಿಕ ಗುತ್ತಿಗೆ ಹಣ 17,09,820/– ರೂ. ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 1,42,485/– ರೂ. ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ತಿಗಳರ (ವಹ್ನಿಕುಲ ಕ್ಷತ್ರಿಯರ) ಸಂಘ (ರಿ) ರವರಿಗೆ ಈ ಹಿಂದೆ ಗುತ್ತಿಗೆಗೆ ನೀಡಿದ್ದ ವಿಸ್ತೀರ್ಣವನ್ನು ಕಡಿಮೆಗೊಳಿಸಿ 2714 ಚದರ ಅಡಿಗಳನ್ನು ಗುತ್ತಿಗೆ ಹಣ ನಿಗಧಿಪಡಿಸಿ ಗುತ್ತಿಗೆ ನೀಡಲು ಪರಿಷ್ಕೃತ ನಿರ್ಣಯ ಹೊರಡಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ ಮೇರೆಗೆ, ಮಾನ್ಯ ಆಯುಕ್ತರ ದಿನಾಂಕ: 29.05.2012ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 17.07.2012ರ ನಿರ್ಣಯ.

**ನಿರ್ಣಯ :–** **ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿ. 17–07–2012ರ ನಿರ್ಣಯವನ್ನು ಒಪ್ಪುತ್ತಾ ಮಾಸಿಕ ರೂ. 6000/- ( ರೂ. ಆರು ಸಾವಿರ ಮಾತ್ರ) ರ ನೆಲ ಬಾಡಿಗೆಯನ್ನು ನಿಗಧಿಪಡಿಸಿ ನೀಡಲು ಸಮಿತಿಯು ತೀರ್ಮಾನಿಸಿತು.**

## 13]. ವಿಷಯದ ಸಂಖ್ಯೆ :–ತೆಆಸ್ಥಾಸ/103/2012–13

ಅಪರ ಆಯುಕ್ತರು (ಆಡಳಿತ) ರವರ ಟಿಪ್ಪಣಿ ಸಂಖ್ಯೆ : ಬಿ12(3)ಪಿಆರ್/186/00–01, ದಿನಾಂಕ: 23–06–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯಲ್ಲಿ ವಿವಿಧ ಇಲಾಖೆಯಲ್ಲಿ ಸಂಚಿತ ವೇತನದ ಮೇಲೆ 7 ಮಂದಿ ಅರೆಕಾಲಿಕ ನೌಕರರುಗಳು (1– ಪ್ರ.ದ.ಗು, 1– ದ್ವಿ.ದ.ಗು, 1– ಪ್ರಯೋಗ ಶಾಲಾ ಸಹಾಯಕರು, 4– ನಾ.ದ.ನೌ ನೌಕರರುಗಳು) ಈ ಕೆಳಕಂಡಂತೆ ಕಾರ್ಯನಿರ್ವಹಿಸುತ್ತಿರುತ್ತಾರೆ.

ಶ್ರೀ ಪ್ರಕಾಶ್, ಇವರನ್ನು ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಬಿ12(3)ಪಿಆರ್/281/95–96, ದಿನಾಂಕ : 13.10.1995 ಮತ್ತು 30–03–1996 ರಂತೆ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರನ್ನಾಗಿ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಗೆ ದಿ: 31–3–1996 ರವರೆಗೆ ಅಥವಾ ಈ ಹುದ್ದೆಗೆ ನೇರ ನೇಮಕಾತಿಯಿಂದ ನಿಯಮಾವಳಿಗಳ ಪ್ರಕಾರ ತುಂಬುವವರೆಗೆ ಮಾತ್ರ ಸಂಚಿತ ವೇತನದ ಮೇರೆಗೆ ರೂ. 2000/–ಗಳಂತೆ ಪಾಲಿಕೆಯ ಕಸ್ತೂರ ಬಾ ನಗರ ಪ್ರೌಢ ಶಾಲೆಯಲ್ಲಿ ಈ ಕೆಳಕಂಡ ಷರತ್ತು ಗೊಳಪಡಿಸಿ, ನೇಮಕ ಮಾಡಿಕೊಳ್ಳಲಾಗಿರುತ್ತದೆ.

1. ಇವರ ನೇಮಕಾತಿ ದಿನಾಂಕ: 31–3–1996ರ ವರೆಗೆ ಮಾತ್ರ ಸೀಮಿತವಾಗಿದ್ದು, ನಂತರ ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ ಎಂದು ಪರಿಗಣಿಸಲಾಗಿದೆ.
2. ಸದರಿಯವರು ನೇಮಕಾತಿಯನ್ನು ಕ್ರಮಬದ್ದಗೊಳಿಸಲು ಒತ್ತಾಯಿಸಬಾರದು.
3. ಇವರ ಕೆಲಸ ನಿರ್ವಹಿಸಿದ ಅವಧಿಗೆ ಯಾವುದೇ ಸೌಲಭ್ಯಕ್ಕೆ ಅಥವಾ ಸೇವಾ ಜೇಷ್ಠತೆಗೆ ಅರ್ಹರಾಗಿರುವುದಿಲ್ಲ.
4. ಸೇವಾ ಅವಧಿ ಮುಗಿದ ನಂತರ ನ್ಯಾಯಾಲಯದ ಮೊರೆ ಹೋಗಬಾರದೆಂಬ ಷರತ್ತಿಗೆ ಒಳಪಟ್ಟಿದೆ.

ಈ ಕಛೇರಿಯ ದಿ:13–10–1995ರ ಜ್ಞಾಪನ ಪತ್ರದಂತೆ ಶ್ರೀಮತಿ.ಗೀತಾ ಹಾಗೂ ಟಿ.ರಮೇಶ್ ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಗೆ 1995–96 ಸಾಲಿನ ಶೈಕ್ಷಣಿಕ ವರ್ಷ ಮುಗಿಯುವವರೆಗೆ ಅಥವಾ ಈ ಹುದ್ದೆಗೆ ನೇರ ನೇಮಕಾತಿಯಿಂದ ನಿಯಮಾವಳಿಗಳ ಪ್ರಕಾರ ತುಂಬುವರೆಗೆ ಮಾತ್ರ ಅರೆಕಾಲಿಕ ದ್ವಿತೀಯ ದರ್ಜೆ ಗುಮಾಸ್ತರಾಗಿ ತಿಂಗಳಿಗೆ ರೂ.1,500 ಸಂಚಿತ ವೇತನದ ಮೇರೆಗೆ ಹಾಗೂ ಪ್ರಯೋಗ ಶಾಲಾ ಸಹಾಯಕರಾಗಿ ಸಂಚಿತ ವೇತನ ರೂ.1,400 ಮೇರೆಗೆ ಪ್ರೌಢಶಾಲಾ ವಿಜಯನಗರದಲ್ಲಿ ಕೆಲವು ಷರತ್ತುಗಳೊಂದಿಗೆ ನೇಮಕ ಮಾಡಲಾಗಿರುತ್ತದೆ.

ಮುಂದುವರೆದು ಶ್ರೀಮತಿ ಗೀತಾ ಹಾಗೂ ಶ್ರೀ ಟಿ. ರಮೇಶ್, ಇವರನ್ನು ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಬಿ12(3)ಪಿಆರ್/281/95–96, ದಿನಾಂಕ : 17.10.1995, 10.10.1995 ಮತ್ತು 23.03.1996 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಗೆ ದಿನಾಂಕ:31–03–1996ರವರೆಗೆ ತಾತ್ಕಾಲಿಕವಾಗಿ ನೇಮಕಮಾಡಿ ಕೊಂಡಿರುವ ಆದೇಶವನ್ನು ಮಾರ್ಪಾಡು ಮಾಡಿ ಮುಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೇರ ನೇಮಕಾತಿಯಿಂದ ನಿಯಮಾವಳಿ ಪ್ರಕಾರ ತುಂಬುವ ವರೆಗೆ ಈ ಕೆಳಕಂಡ ನೌಕರರನ್ನು ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸಲು ಮುಂದುವರೆಸಲಾಗಿರುತ್ತದೆ.

1) ಶ್ರೀಮತಿ.ಆರ್.ಗೀತಾ. ದ್ವಿ.ದ.ಗು ರವರ ಸಂಚಿತ ವೇತನ ರೂ.1,500
2) ಶ್ರೀ.ಟಿ.ರಮೇಶ್ ಪ್ರಯೋಗ ಶಾಲಾ ಸಹಾಯಕರು ರವರ ಸಂಚಿತ ವೇತನ ರೂ.1,400
3) ಶ್ರೀ.ಎಸ್.ಬಿ.ಲಕ್ಷ್ಮೀನಾರಾಯಣ, ನಾ.ದ.ನೌ ರವರ ಸಂಚಿತ ವೇತನ ರೂ.1,300

ಈ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ : ಬಿ12(3)ಪಿಆರ್/281/95–96, ದಿನಾಂಕ : 10.10.1995 ಮತ್ತು 30.03.1996 ಈ ಕೆಳಕಂಡ ನೌಕರರನ್ನು ನಾಲ್ಕನೇ ದರ್ಜೆ ನೌಕರರಾಗಿ ದಿನಾಂಕ:31–03–1996 ರವರೆಗೆ ಅಥವಾ ಈ ಹುದ್ದೆಗೆ ನೇರ ನೇಮಕಾತಿಯಿಂದ ನಿಯಮಾವಳಿಗಳ ಪ್ರಕಾರ ತುಂಬುವರೆಗೆ ಮಾತ್ರ ಅರೆಕಾಲಿಕ ಜವಾನರಾಗಿ ತಿಂಗಳಿಗೆ ರೂ.1,300 ಸಂಚಿತ ವೇತನ ಮೇರೆಗೆ ಕೆಲವು ಷರತ್ತುಗಳೊಂದಿಗೆ ನೇಮಕ ಮಾಡಲಾಗಿರುತ್ತದೆ.

1) ಶ್ರೀಮತಿ ಮಹಾದೇವಮ್ಮ ನಾ.ದ.ನೌ
2) ಶ್ರೀ ಜಿ. ಗಂಗಪ್ಪ. ನಾ.ದ.ನೌ
3) ಶ್ರೀಮತಿ ಮಂಜುಳಾದೇವಿ, ನಾ.ದ.ನೌ.
4) ಶ್ರೀ.ಎಸ್.ಬಿ.ಲಕ್ಷ್ಮೀನಾರಾಯಣ, ನಾ.ದ.ನೌ.

ಅದೇ ರೀತಿ, ಆಯುಕ್ತರ ಕಛೇರಿಯ ದಿನಾಂಕ:30–03–1996ರ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ಬಿ12(3)ಪಿಆರ್/281/95–96 ರಂತೆ ದಿನಾಂಕ:31–03–1996ರವರೆಗೆ ತಾತ್ಕಾಲಿಕವಾಗಿ ನೇಮಕಮಾಡಿ ಕೊಂಡಿರುವ ಆದೇಶವನ್ನು ಮಾರ್ಪಾಡು ಮಾಡಿ ಮುಂದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೇರ ನೇಮಕಾತಿಯಿಂದ ನಿಯಮಾವಳಿ ಪ್ರಕಾರ ತುಂಬುವ ವರೆಗೆ ಈ ಕೆಳಕಂಡ ನೌಕರರನ್ನು ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸಲು ಮುಂದುವರೆಸಲಾಗಿರುತ್ತದೆ.

1) ಶ್ರೀ ಪ್ರಕಾಶ ಪ್ರ.ದ.ಗು ರವರ ಸಂಚಿತ ವೇತನ ರೂ.2000
2) ಶ್ರೀಮತಿ ಮಹಾದೇವಮ್ಮ ನಾ.ದ.ನೌ ರವರ ಸಂಚಿತ ವೇತನ ರೂ.1300

3) ಶ್ರೀ ಜಿ. ಗಂಗಪ್ಪ. ನಾ.ದ.ನೌ ರವರ ಸಂಚಿತ ವೇತನ ರೂ.1300

4) ಶ್ರೀಮತಿ ಮಂಜುಳಾದೇವಿ, ನಾ.ದ.ನೌ. ರವರ ಸಂಚಿತ ವೇತನ ರೂ.1300

ಈ ಮಧ್ಯೆ ಶ್ರೀ ಪ್ರಕಾಶ್ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರು ಹಾಗೂ ಆರು ಮಂದಿ ಅರೆಕಾಲಿಕ ನೌಕರರು ಸೇವೆಯನ್ನು ಖಾಯಂ ಮಾಡಲು ಕೊರಿರುವ ಮನವಿ ದಿನಾಂಕ : 27–12–2005, ಮತ್ತು 16–01–2006 ರಂದು ಮನವಿ ಸಲ್ಲಿಸಿ ಕ್ರಮಬದ್ದಗೊಳಿಸಲು ಕೋರಿರುವ ಮೇರೆಗೆ ಸರ್ಕಾರಕ್ಕೆ ಸ್ಪಷ್ಟೀಕರಣ ಕೋರಲಾಗಿ ಸರ್ಕಾರವು ಪತ್ರದ ಸಂಖ್ಯೆ: ನಅಇ/506/ಎಂ.ಎನ್.ವೈ/2001, ದಿ: 23.05.2002ರ ರೀತ್ಯ, ಅರೆಕಾಲಿಕ ಸೇವೆಯನ್ನು ನಿಯಮಗಳ ಪ್ರಕಾರ ಸಕ್ರಮಗೊಳಿಸಲು ಬರುವುದಿಲ್ಲವೆಂದು ಆದೇಶಿಸಿರುವಂತೆ ಈ ಕಛೇರಿಯ ಹಿಂಬರಹದ ಸಂಖ್ಯೆ : ಬಿ12(3)ಪಿಆರ್/186/00–01, ದಿನಾಂಕ : 13/28.02.2006 ರಂತೆ ಹಿಂಬರಹ ಜಾರಿ ಮಾಡಲಾಗಿರುತ್ತದೆ.

ಶ್ರೀ ಪ್ರಕಾಶ್, ಅರೆಕಾಲಿಕ ಪ್ರ.ದ.ಗು, ರವರು ಈ ಹಿಂಬರಹದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ರಿಟ್‌ಪಿಟಿಷನ್ ಸಂಖ್ಯೆ: 9268/2006(ಎಸ್)ರಲ್ಲಿ ದಾವೆ ಹೂಡಿದ್ದು, ಸದರಿ ದಾವೆಗೆ ಘನ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ : 9268/2006 (ಎಸ್) ರ ಆದೇಶ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 30–6–2008 ರಂದು, "The Petition stands disposed of directing the respondent to reconsider the claim of the petitioner for regularisation having regard to the ratio laid down by the Apex Court in Umadevi's case. The resultant effect, the impugned order at Annexure-K stands quashed." ಎಂದು ಆದೇಶ ಹೊರಡಿಸಲಾಗಿದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಈ ಪ್ರಕರಣವನ್ನು ಮರುಪರಿಶೀಲಿಸಲಾಗಿ, ಶ್ರೀ ಪ್ರಕಾಶ್, ಅರೆಕಾಲಿಕ ಪ್ರ.ದ.ಗು., ರವರಿಗೆ ದಿನಾಂಕ :17–02–2009 ರಂದು ನೋಟೀಸ್ ಜಾರಿ ಮಾಡಲಾಗಿದೆ. ಸದರಿಯವರು ದಿನಾಂಕ: 09–03–2009 ರಂದು ಸಲ್ಲಿಸಿರುವ ಉತ್ತರದಲ್ಲಿ, ತನ್ನ ಹಾಗೆಯೇ ಸಂಚಿತ ವೇತನದಲ್ಲಿ ನೇಮಿಸಿಕೊಂಡಂತಹ ಶ್ರೀ ಗೋವಿಂದರಾಜು ಮತ್ತು ಶ್ರೀ ಸಿ.ರಮೇಶ್ ಅರೆಕಾಲಿಕ ಶಿಕ್ಷಕರನ್ನು ಖಾಯಂ ನೌಕರರೆಂದು ದಿ: 08–10–1998 ರಂದು ಆದೇಶ ಹೊರಡಿಸಿರುವಂತೆ, ತಮ್ಮನ್ನೂ ಸಹ, ಕ್ರಮಬದ್ದಗೊಳಿಸಲು ಕೋರಿದ್ದರು.

ಇದೇ ರೀತಿಯ ಪ್ರಕರಣದವೊಂದರಲ್ಲಿ, ಶ್ರೀ ಗೋವಿಂದರಾಜು (ಹಾಲಿ ಮರಣ) ಮತ್ತು ಶ್ರೀ ಸಿ.ರಮೇಶ್ ಅರೆಕಾಲಿಕ ಶಿಕ್ಷಕರುಗಳನ್ನು ಕ್ರಮಬದ್ಧಗೊಳಿಸುವ ಪ್ರಕರಣದಲ್ಲಿ ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯಿಸಿರುವ ಶ್ರೀಮತಿ ಉಮಾದೇವಿ, ಪ್ರಕರಣವು **(Case reported in(2006) 4 SCC 1)**ದಿನಗೂಲಿ ನೌಕರರಿಗೆ ಮಾತ್ರ ಅನ್ವಯವಾಗಲಿದ್ದು, ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ನ್ಯಾಯಾಲಯವು ಅವಲೋಕಿಸಿರುವಂತೆ, ನಾಲ್ಕು ಷರತ್ತುಗಳನ್ನು ಪೂರೈಸಿದ ನೌಕರರನ್ನು ಒಂದು ಬಾರಿಯ ಕ್ರಮವಾಗಿ ಸಕ್ರಮಗೊಳಿಸಲು ಪರಿಗಣಿಸಬಹುದಾಗಿದೆ ಎಂಬುದಾಗಿ ನಿರ್ದೇಶನವಿರುವಂತೆ, ಸದರಿ ನಾಲ್ಕು ಷರತ್ತುಗಳನ್ನು ಮೇಲಿನ ಅರೆಕಾಲಿಕ ನೌಕರರು ಪೂರೈಸಿರುವರೆಂದು ಪರಿಗಣಿಸಿದಲ್ಲಿ, ಸದರಿಯವರುಗಳು ಅರೆಕಾಲಿಕ ಶಿಕ್ಷಕರುಗಳಾಗಿರುವುದರಿಂದ ಶ್ರೀಮತಿ ಉಮಾದೇವಿ ಪ್ರಕರಣದಲ್ಲಿ ದಿನಗೂಲಿ ನೌಕರರಿಗೆ ಅನ್ವಯವಾಗುವಂತೆ ನೀಡಿರುವ ಆದೇಶಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲವೆಂದು ಹಾಗೂ ಶ್ರೀ ಸಿ. ರಮೇಶ್ ಮತ್ತು ಶ್ರೀ ಗೋವಿಂದರಾಜು (ಹಾಲಿ ಮರಣ ಹೊಂದಿರುತ್ತಾರೆ) ಅರೆಕಾಲಿಕ ಸಹ ಶಿಕ್ಷಕರನ್ನು ಅರೆಕಾಲಿಕ ಸಹ ಶಿಕ್ಷಕರಾಗಿಯೇ ಮುಂದುವರೆಸಿ ದಿ: 15–07–2009ರಂದು ಆದೇಶ ಹೊರಡಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಪ್ರಕಾಶ್ ಬಿನ್ ಲಿಂಗಯ್ಯ ರವರು ಪೂರ್ಣಾವಧಿ ನೌಕರರಾಗಿರದೇ ಅರೆಕಾಲಿಕ ನೌಕರರಾಗಿದ್ದು ದಿನಾಂಕ: 01–01–1986ರ ನಂತರ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವವರನ್ನು ಈ ಕಛೇರಿ ಆದೇಶ ಸಂಖ್ಯೆ : ಬಿ12(3)ಪಿಆರ್/186/00–01, ದಿನಾಂಕ : 12.08.2009 ರಂತೆ ಸಕ್ರಮಗೊಳಿಸಲು ನಿಯಮಾವಳಿಯಲ್ಲಾಗಲಿ, ಸರ್ಕಾರದ ಆದೇಶಗಳಲ್ಲಾಗಲಿ ಅವಕಾಶವಿಲ್ಲದಿರುವುದರಿಂದ ಸದರಿಯವರನ್ನು ಮುಂದಿನ ಆದೇಶದವರೆವಿಗೂ ಅರೆಕಾಲಿಕ ಪ್ರಥಮ ದರ್ಜೆ ಗುಮಾಸ್ತರಾಗಿಯೇ ಮುಂದುವರೆಸಲಾಗಿದೆ.

ಸದರಿ 7 ಮಂದಿ ಅರೆಕಾಲಿಕ ನೌಕರರುಗಳ ಪೈಕಿ ಶ್ರೀಮತಿ. ಆರ್. ಗೀತಾ. ದ್ವಿ.ದ.ಗು ರವರು ದಿ:31–12–2010ರಂತೆ ಮನವಿಯನ್ನು ಸಲ್ಲಿಸಿ ಸದರಿಯವರ ಅನಾರೋಗ್ಯದ ಕಾರಣ ಶಾಲಾ ಕರ್ತವ್ಯದಿಂದ ಬಿಡುಗಡೆ ಮಾಡಲು ಕೋರಿರುವಂತೆ, ಈ ಕಛೇರಿ ಸಮ ಸಂಖ್ಯೆಯ ಆಂತರಿಕ ಕಛೇರಿ ಟಿಪ್ಪಣಿ ದಿನಾಂಕ : 29–01–2011 ರಂತೆ ಪಾಲಿಕೆಯ ಸೇವೆಯಿಂದ ಬಿಡುಗಡೆ ಮಾಡಲಾಗಿರುತ್ತದೆ. ಪ್ರಸ್ತುತ ಪಾಲಿಕೆಯಲ್ಲಿ 6 ಮಂದಿ ಅರೆಕಾಲಿಕ ನೌಕರರುಗಳ ವಿವರಗಳನ್ನು ಈ ಕಛೇರಿ ಆದೇಶ ಸಂಖ್ಯೆ : ಬಿ12(3)ಪಿಆರ್/186/00–01, ದಿನಾಂಕ : 12.08.2009 ರಂತೆ ಸಂಬಂಧಪಟ್ಟ ಬಟವಾಡೆ ಅಧಿಕಾರಿಯವರಿಗೆ ಒದಗಿಸಲು ಕೋರಿರುವಂತೆ ಈ ಕೆಳಕಂಡಂತೆ ಮಾಹಿತಿಯನ್ನು ಒದಗಿಸಿರುತ್ತಾರೆ.

| ಕ್ರ. ಸಂ | ಅರೆಕಾಲಿಕ ನೌಕರರ ಹೆಸರು ಮತ್ತು ಪದನಾಮ | ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳ | ಸಂಚಿತ ವೇತನ | ಷರಾ |
|---|---|---|---|---|
| 1. | ಶ್ರೀ ಪ್ರಕಾಶ, ಪ್ರ.ದ.ಗು | ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆ. | ರೂ.2,000/- | ಸದರಿಯವರು ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಪಾಲಿಕೆ ಖಾಯಂ ನೌಕರಾದ ಶ್ರೀಮತಿ ಎಂ.ಕವಿತ, ಪ್ರ.ದ.ಸ.ರವರು ದಿನಾಂಕ:22-11-2010ರಂದು ಜಂಟಿ ಆಯುಕ್ತರು (ಪಶ್ಚಿಮ) ರವರ ಆದೇಶ ಸಂಖ್ಯೆ:ಸ.ಕಂ.ಅ.(ಶ್ರೀರಾಮ)/ಪಿಆರ್/542/10-11 ರಂತೆ ಕಾರ್ಯನಿರ್ವಹಿಸುತ್ತಿರುತ್ತಾರೆ. ಹಾಗೂ ಶ್ರೀ ಪ್ರಕಾಶ, ಅರೆಕಾಲಿಕ ಪ್ರ.ದ.ಗು ರವರು ಈ ಕಛೇರಿಯ ಆದೇಶ ಸಂಖ್ಯೆ:ಬಿ12(3)ಪಿಆರ್/186/00-01, ದಿನಾಂಕ:23-12-2009 ರಂತೆ ಸಂಚಿತ ವೇತನದ ಮೇಲೆ ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. |
| 2. | ಶ್ರೀ ರಮೇಶ. ಪ್ರಯೋಗಶಾಲೆ ಸಹಾಯಕರು, | ಪಾಲಿಕೆಯ ಪ್ರೌಢ ಶಾಲೆ ವಿದ್ಯಾರಣ್ಯ ನಗರ, ಮಾಗಡಿ ರಸ್ತೆ. | ರೂ.1,400/- | ಸದರಿ ಅರೆಕಾಲಿಕ ನೌಕರರನ್ನು ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಸಂಖ್ಯೆ:ಬಿ12(3)ಪಿಆರ್/(3)ಪಿಆರ್/281/ 95-96, ದಿನಾಂಕ:23-03-1996 ರಂತೆ ದಿನಾಂಕ: 31-03-1996ರವರೆಗೆ ತಾತ್ಕಾಲಿಕವಾಗಿ ನೇಮಕ ಮಾಡಿ ಕೊಂಡಿರುವ ಆದೇಶವನ್ನು ಮಾರ್ಪಾಡು ಮಾಡಿ ಪಾಲಿಕೆಯಲ್ಲಿ ನೇರ ನೇಮಕಾತಿ ಯಿಂದ ನಿಯಮಾವಳಿ ಪ್ರಕಾರ ತುಂಬುವವರೆಗೆ ಸಂಚಿತ ವೇತನದಲ್ಲಿ ಪಾಲಿಕೆ ಪ್ರೌಢಶಾಲೆ ವಿಜಯನಗರ ಕಾರ್ಯನಿರ್ವಹಿಸಲು ಮುಂದುವರೆಸಲಾಗಿರುತ್ತದೆ. ಇದರಂತೆ ಸದರಿಯವರು ಪಾಲಿಕೆ ಪ್ರೌಢಶಾಲೆ ವಿಜಯನಗರ ಇಲ್ಲಿ ವೇತನ ಪಡೆದು ಪಾಲಿಕೆ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. |
| 3. | ಶ್ರೀ.ಲಕ್ಷ್ಮಿನಾರಾಯಣ ನಾ.ದ.ನೌ | ಪಾಲಿಕೆಯ ಪ್ರೌಢ ಶಾಲೆ, ವಿದ್ಯಾರಣ್ಯ ನಗರ, ಮಾಗಡಿ ರಸ್ತೆ, | ರೂ.1,300/- | ಮುಖ್ಯೋಪಾಧ್ಯಾಯರು, ಪಾಲಿಕೆ ಪ್ರೌಢಶಾಲೆ ವಿಜಯನಗರ ರವರನ್ನು ದೂರವಾಣಿ ಮೂಲಕ ಸಂಪರ್ಕಿಸಲಾಗಿದಂತೆ, ಸದರಿಯವರ ಶಾಲೆಯಲ್ಲಿ ಜವಾನರ ಮಂಜೂರಾತಿ ಹುದ್ದೆ ಒಂದು ಇದ್ದು ಸದರಿ ಹುದ್ದೆಯಲ್ಲಿ ಪಾಲಿಕೆ ಖಾಯಂ ನೌಕರಾದ ಶ್ರೀ ಎನ್. ರಮೇಶ ರವರು ವೇತನ ಪಡೆದು ಓಓಡಿ ಮೇಲೆ ಪಾಲಿಕೆಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಮಾಗಡಿ ರಸ್ತೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ ಶ್ರೀ ಲಕ್ಷ್ಮಿನಾರಾಯಣ, ಅರೆಕಾಲಿಕ ನಾ.ದ.ನೌ ರವರು ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದಸಂಖ್ಯೆ:ಬಿ12(3)ಪಿಆರ್/(3)ಪಿಆರ್/281/ 95-96, ದಿನಾಂಕ: 23-03-1996 ರಂತೆ ಸಂಚಿತ ವೇತನದ ಮೇಲೆ ಕಾರ್ಯನಿರ್ವಹಿಸುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ. |
| 4. | ಶ್ರೀಮತಿ ಮಹಾದೇವಮ್ಮ ನಾ.ದ.ನೌ | ಆರೋಗ್ಯ ಕೇಂದ್ರ, ಗಂಗೊಂಡನ ಹಳ್ಳಿ | ರೂ.1,300/- | ಯಶವಂತಪುರ ಹೆರಿಗೆ ಆಸ್ಪತ್ರೆಯಲ್ಲಿ ಜವಾನರ ಮಂಜೂರಾತಿ ಹುದ್ದೆಗಳು 3 ಇದ್ದು, ಪಾಲಿಕೆ ಖಾಯಂ ನೌಕರರಾದ ಹೆಚ್.ಜೈರಾಮ್ ಮಾತ್ರ ಕಾರ್ಯ ನಿರ್ವಹಿಸುತ್ತಿದ್ದು, ಉಳಿದ 2 ಖಾಯಂ ಜವಾನರ ಹುದ್ದೆಗಳು ಖಾಲಿ ಇದ್ದ ಕಾರಣ ಹಾಲಿ ಖಾಲಿರುವ ಜವಾನರ |

| | | | | |
|---|---|---|---|---|
| 5. | ಶ್ರೀ ಜಿ. ಗಂಗಪ್ಪ. ನಾ.ದ.ನೌ | ಆರೋಗ್ಯ ಕೇಂದ್ರ, ಆಂಜನಪ್ಪ ಗಾರ್ಡನ್ ಮೈಸೂರು ರಸ್ತೆ. | ರೂ.1,300/– | ಹುದ್ದೆಗೆ ಅರೆಕಾಲಿಕ ಸದರಿ ನೌಕರರನ್ನು ಜವಾನರ ಹುದ್ದೆಗೆ ಸಂಚಿತ ವೇತನ 1300/– ಮೇರೆಗೆ ದಿ:30–03–1996 ರಂತೆ ನೇಮಕಾತಿ ಮಾಡಲಾಗಿದ್ದು ಕಾರ್ಯನಿರ್ವಹಿಸುತ್ತಿರುತ್ತಾರೆ. |
| 6. | ಶ್ರೀಮತಿ ಮಂಜುಳಾ ನಾ.ದ.ನೌ. | ಹೆರಿಗೆ ಆಸ್ಪತ್ರೆ. ಕೆ.ಪಿ.ಅಗ್ರಹಾರ | ರೂ.1,300/– | ಸದರಿ ಅರೆಕಾಲಿಕ ನೌಕರರನ್ನು ಈ ಕಛೇರಿಯ ಅಧಿಕೃತ ಜ್ಞಾಪನಾ ಪತ್ರದ ಸಂಖ್ಯೆ:ಬಿ12(3)ಪಿಆರ್/281/95–96, ದಿನಾಂಕ:18–10–1995ರಂತೆ ದಿನಾಂಕ:31–03–1996 ರವರೆಗೆ ಅಥವಾ ಸದರಿ ಹುದ್ದೆಯನ್ನು ನೇರ ನೇಮಕಾತಿ ಯಿಂದ ನಿಯಮಾವಳಿ ಪ್ರಕಾರ ತುಂಬುವವರೆಗೆ ಅರೆಕಾಲಿಕ ಜವಾನರಾಗಿ ಸಂಚಿತ ವೇತನ ರೂ.1300/–ರಂತೆ ಆರೋಗ್ಯ ಇಲಾಖೆಯ ಕೋದಂಡರಾಮಪುರ ಹೆರಿಗೆ ಆಸ್ಪತ್ರೆಗೆ ಖಾಲಿ ಇರುವ ಹುದ್ದೆಗೆ ನೇಮಿಸಿರುವಂತೆ ಸದರಿಯವರು ಕೋದಂಡರಾಮಪುರ ಹೆರಿಗೆ ಆಸ್ಪತ್ರೆಯಲ್ಲಿ ವೇತನ ಪಡೆದು ಮಾಗಡಿ ರಸ್ತೆ ಹೆರಿಗೆ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |

ಸದರಿ ಅರೆಕಾಲಿಕ ನೌಕರರು ದಿನಾಂಕ:31–08–2010 ಮತ್ತು 21–10–2011 ರಂದು ಮನವಿಯನ್ನು ಸಲ್ಲಿಸಿ, 1995ರಿಂದ ಪಾಲಿಕೆಗೆ ಅರೆಕಾಲಿಕ ನೌಕರಿಗೆ ಸಂಚಿತ ವೇತನದಲ್ಲಿ ಆರು ಜನ ನೌಕರರು ನೇಮಕಗೊಂಡು ತಿಂಗಳಿಗೆ 1300, 1400 ಹಾಗೂ 2000 ರೂ.ಗಳನ್ನು ಪಡೆದುಕೊಂಡು ಕೆಲಸದಲ್ಲಿ ಬಿಡುವಿಲ್ಲದೆ ಕಾರ್ಯನಿರ್ವಹಿಸುತ್ತಾ ಬರುತ್ತಿದ್ದು, ಇಲ್ಲಿಗೆ 16 ವರ್ಷಗಳು ಕಳೆದರೂ ಕೆಲಸದಲ್ಲಿ ಯಾವುದೇ ಭದ್ರತೆಯಿಲ್ಲದೇ ಇದ್ದು ಕಡಿಮೆ ವೇತನದಲ್ಲಿ ನಮ್ಮನ್ನು ದುಡಿಸಿಕೊಳ್ಳುತ್ತಾ ಬರುತ್ತಿದ್ದು, ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿದ್ದು, ನೀಡುವ ವೇತನ ಏನೇನೂ ಸಾಕಾಗದೇ ಹೋಗಿರುವುದರಿಂದ ಜೀವನ ಸುಧಾರಿಸಲು ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನೀಡಲು ಕೋರಿರುತ್ತಾರೆ. ಹಾಗೂ ಮನವಿಯೊಂದಿಗೆ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 49 ಎಸ್ಎಲ್ಸಿ 84, ಬೆಂಗಳೂರು ದಿನಾಂಕ: 31–12–1986 ಪ್ರತಿಯನ್ನು ಸಲ್ಲಿಸಿರುತ್ತಾರೆ.

**ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 49 ಎಸ್ಎಲ್ಸಿ 84, ಬೆಂಗಳೂರು ದಿನಾಂಕ: 31–12–1986ರಂತೆ,** ನಿಯತಕಾಲಿಕ ವೇತನ ಶ್ರೇಣಿಯ ಕನಿಷ್ಟ ವೇತನಕ್ಕಿಂತ 10/– ರೂ. ಕಡಿಮೆಗೆ ಸಮಾನವಾದ ಸಂಚಿತ ವೇತನದ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕವಾಗಿದ್ದ ಸ್ಥಳೀಯ ಅಭ್ಯರ್ಥಿಗಳಿಗೆ ನಿಯತಕಾಲಿಕ ವೇತನವನ್ನು ಮಂಜೂರು ಮಾಡುವ ಬಗ್ಗೆ ಈ ಕೆಳಕಂಡ ಆದೇಶ ನೀಡಿದೆ.

1. ದಿನಾಂಕ:25–11–1977ರ ಆದೇಶದ ಪ್ರಕಾರ ಸಂಚಿತ ವೇತನದ ಆಧಾರದ ಮೇಲೆ ನೇಮಕವಾದ ಎಲ್ಲಾ ಸ್ಥಳೀಯ ಅಭ್ಯರ್ಥಿಗಳಿಗೆ ಅವರ ಹುದ್ದೆಗಳಿಗೆ ನಿಗಧಿಪಡಿಸಿರುವ ವೇತನ ಶ್ರೇಣಿಯನ್ನು ದಿನಾಂಕ:01–04–1986ರಿಂದ ಮಂಜೂರು ಮಾಡತಕ್ಕದ್ದು.
2. ಸಂಚಿತ ವೇತನದ ಆಧಾರದ ಮೇಲೆ ನೇಮಕವಾದ ದಿನದಂದು ಅವರು ನೇಮಕವಾದ ಹುದ್ದೆಗೆ ನಿಗಧಿಪಡಿಸಿರುವ ವೇತನ ಶ್ರೇಣಿಯ ವೇತನವನ್ನು ಮಂಜೂರು ಮಾಡಿದ್ದರೆ ಅವರು ಈ ವೇತನ ಶ್ರೇಣಿಯಲ್ಲಿ ಯಾವ ವೇತನವನ್ನು 1–04–1986ರಂದು ಪಡೆಯುತ್ತಿದ್ದರೋ ಅದೇ ವೇತನವನ್ನು ದಿನಾಂಕ:01–04–1986ರಂದು ನಿಗಧಿಪಡಿಸತಕ್ಕದ್ದು.
3. ಹೀಗೆ ನಿಗಧಿಪಡಿಸಿದ ವೇತನದ ಬಾಕಿಯನ್ನು ದಿನಾಂಕ: 01–04–1986ಕ್ಕೆ ಮುಂಚೆ ಸ್ಥಳೀಯ ಅಭ್ಯರ್ಥಿಯಾಗಿ ಸಲ್ಲಿಸಿದ ಸೇವೆಗೆ ನಿಗಧಿಪಡಿಸಿದ ವೇತನ ಬಾಕಿಯನ್ನು ಅವರಿಗೆ ಪಾವತಿ ಮಾಡಕೂಡದು.

ಸದರಿ ಸರ್ಕಾರಿ ಆದೇಶ ಸಂಬಂದಿಸಿದಂತೆ ಮುಖ್ಯ ಲೆಕ್ಕಪರೀಶೋಧಕರ ರವರು **ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 49 ಎಸ್ಎಲ್ಸಿ 84, ಬೆಂಗಳೂರು ದಿನಾಂಕ: 31–12–1986ರಂತೆ,** ನಿಯತಕಾಲಿಕ ವೇತನ ಶ್ರೇಣಿಯ ಕನಿಷ್ಟ ವೇತನಕ್ಕಿಂತ 10/– ರೂ. ಕಡಿಮೆಗೆ ಸಮಾನವಾದ ಸಂಚಿತ ವೇತನದ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕವಾಗಿದ್ದ ಸ್ಥಳೀಯ ಅಭ್ಯರ್ಥಿಗಳಿಗೆ ನಿಯತಕಾಲಿಕ ವೇತನವನ್ನು ಮಂಜೂರು ಮಾಡುವುದಕ್ಕೆ ಸಂಬಂಧಿಸಿರುತ್ತದೆ. ಈ ಪ್ರಕರಣವು ಅರೆಕಾಲಿಕ ನೌಕರರಿಗೆ ಸಂಬಂಧಿಸಿದ್ದು ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲು ಸೂಚಿಸಿರುತ್ತಾರೆ.

ಕಾನೂನು ಕೋಶದ ಮುಖ್ಯಸ್ಥರವರು **ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್49ಎಸ್ಎಲ್ಸಿ 84, ದಿನಾಂಕ: 31–12–1986ರಂತೆ,** ಪಾಲಿಕೆಯ ವಿದ್ಯಾ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅರೆಕಾಲಿಕ ನೌಕರರಿಗೆ ನಿಯತಕಾಲಿಕ ವೇತನ ನೀಡುವಲ್ಲಿ

ಅವಕಾಶಗಳು ಕಂಡುಬರುವುದಿಲ್ಲ. ಮುಖ್ಯ ಲೆಕ್ಕಪರಿಶೋಧಕರು ತಮ್ಮ ಅಭಿಪ್ರಾಯ ವರದಿಯಲ್ಲಿ ವಿವರಿಸಿರುವಂತೆ ನಿಯಮಾನುಸಾರ ಕನಿಷ್ಠ ವೇತನ ಕಾಯ್ದೆ ಅಡಿಯಲ್ಲಿ ನಿಗಧಿಪಡಿಸಿರುವ ವೇತನಗಳನ್ನು ಪಾವತಿಸುವಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸಮಂಜಸವೆಂದು ಅಭಿಪ್ರಾಯ ನೀಡಿರುತ್ತಾರೆ.

**ದಿನಗೂಲಿ ನೌಕರರುಗಳಿಗೆ ಸಂಬಂದಿಸಿದಂತೆ, ಸರ್ಕಾರದ ಡಿಪಿಎಆರ್, ಹೆಚ್‌ಯುಡಿ ಆದೇಶಗಳು ಈ ಕೆಳಕಂಡಂತೆ ಇರುತ್ತದೆ.**

1. **GOVERNMET ORDER NO. HUD 31 MNE 01, BANGALORE, DATED: 21-08-1995**

****

Regularisation of Daily wages/Monthly rated/ time scale employees of all the TMCs/ CMCs/ Corporation and Boards coming under the Control of Housing & Urban Development.

2. **GOVERNMET ORDER NO.DPAR 12/SLC/97/BANGALORE DATED:26-09-1998**

****

Sub: Counting, for the purpose of pension, the service roundered prior to regularization the Daily Wage Employees whose Services have been regularized as per Government Order No. DPAR 2SLC 90, Dated 6.8.1990 read with the subsequent Orders/Instructions.

3. **ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯದ ಸುತ್ತೋಲೆ ಸಂಖ್ಯೆ : ಸಿಅಸುಇ 1ಸೇಸ್ಥ 99, ಬೆಂಗಳೂರು, ದಿನಾಂಕ: 24ನೇ ಮಾರ್ಚ 1999.**

**************

ವಿಷಯ: ದಿನಾಂಕ:6ನೇ ಆಗಸ್ಟ್ 1990ರ ಸರ್ಕಾರಿ ಆದೇಶ ಸಂಖ್ಯೆ: ಸಿಅಸುಇ 2 ಸೇಸ್ಥ 90 ಹಾಗೂ ಸಂಬಂಧಿಸಿದ ತದನಂತರದ ಆದೇಶ ಸುತ್ತೋಲೆ ಸಂಖ್ಯೆ: ಅಧಿಕೃತ ಜ್ಞಾಪನಾ ಇತ್ಯಾಧಿಗಳ ಅನ್ವಯ ಸಕ್ರಮಗೊಳಿಸಲಾದ ದಿನಗೂಲಿ ನೌಕರರಿಗೆ ವೇತನದ ಬಾಕಿಯನ್ನು ನೀಡುವ ಕುರಿತು.

ಸುಪ್ರೀಂ ಕೋರ್ಟಿನ ದಿನಾಂಕ:23ನೇ ಫೇಬ್ರವರಿ 1990ರ ತೀರ್ಪಿನ ಪ್ರಕಾರ ದಿನಾಂಕ: 1ನೇ ಜುಲೈ 1984ಕ್ಕಿಂತ ಮುಂದೆ ನೇಮಕವಾದ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವ ಕುರಿತು ಮೇಲೆ (1)ರಲ್ಲಿ ಉಲ್ಲೇಖಿಸಿದ ದಿನಾಂಕ:6ನೇ ಆಗಸ್ಟ್ 1990ರ ಆದೇಶ ಹಾಗೂ ತದನಂತರದ ಆದೇಶ, ಅಧಿಕೃತ ಜ್ಞಾಪನ, ಸುತ್ತೋಲೆ ಇತ್ತಾಧಿಗಳಲ್ಲಿ ಸೂಕ್ತ ಸೂಚನೆಗಳನ್ನು ನೀಡಲಾಗಿದೆ. ಮೇಲೆ (2)ರಲ್ಲಿ ಉಲ್ಲೇಖಿಸಿದ ದಿನಾಂಕ:4ನೇ ಡಿಸೆಂಬರ್ 1990ರ ಅಧಿಕೃತ ಜ್ಞಾಪನದ ಕಂಡಿಕೆ 5ನ್ನು ಈ ಕೆಳಗೆ ಉದ್ಧರಿಸಿದೆ.

"Government hereby direct that necessary action should be taken to regularize the services of the daily rated employees who have completed 10 years of service as on 31st December 1989, immediately with effect from 1st January 1990"

ಆದರೆ ಹಲವು ಪ್ರಕರಣಗಳಲ್ಲಿ ಅರ್ಹ ದಿನಗೂಲಿ ನೌಕರರ ಸೇವೆಯನ್ನು ಅವರು ಹತ್ತು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ತಕ್ಷಣ ಸಕ್ರಮಗೊಳಿಸಿ, ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಿಗಳು ಸಕ್ರಮವಾಗಿ ಆದೇಶಗಳನ್ನು ಹೊರಡಿಸಿರುವುದಿಲ್ಲ. ಇದರ ಪರಿಣಾಮವಾಗಿ ಅವರು ಸಕ್ರಮಾತಿ ಹೊಂದಲು ಅರ್ಹತೆಯನ್ನು ಹೊಂದಿದ ದಿನಾಂಕ ಮತ್ತು ಅವರನ್ನು ಸಕ್ರಮಗೊಳಿಸಿ ಆದೇಶ ಹೊರಡಿಸಿದ ದಿನಾಂಕ ಈ ಎರಡೂ ಘಟನೆಗಳ ನಡುವೆ ಕಾಲದ ಅಂತೆ (time gap) ಆಗಿರುತ್ತದೆ. ಅವರು ಪಡೆಯಲು ಅರ್ಹರಿರುವ ವೇತನದ ಬಾಕಿಯನ್ನು ಸದರಿ ಅವಧಿಗಾಗಿ ವಿಳಂಬ ಮಾಡದೇ ನೀಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

4. **ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯದ ಆದೇಶ ಸಂಖ್ಯೆ: ಸಿಆಸುಇ/15/ಸೇಸಅ/2004, ಬೆಂಗಳೂರು ದಿನಾಂಕ: 08–07–2004**

*********

ವಿಷಯ: ದಿನಗೂಲಿ ಆಧಾರದ ಮೇಲೆ ಮಾಸಿಕ ವೇತನ ಸಿಬ್ಬಂದಿಯಾಗಿ ಸಲ್ಲಿಸಿರುವ ಸೇವೆಯನ್ನು ನಿವೃತ್ತಿ ವೇತನ ಸೌಲಭ್ಯ ಪರಿಗಣಿಸುವ ಕುರಿತು.

5. **GOVERNMENT ORDER NO. DPEA 12/SLC/90/BANGALORE DATED 26-09-1998**

****

Subject: Regularization of Casual/Daily Rated Employees-Orders thereon

ಮೇಲ್ಕಂಡ ಸರ್ಕಾರಿ ಆದೇಶಗಳು ಹಾಗೂ ಸುತ್ತೋಲೆಗಳನ್ವಯ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ನೌಕರರುಗಳ ಸೇವೆಯನ್ನು ಸಕ್ರಮಗೊಳಿಸಲು ಹಾಗೂ ವೇತನ ಶ್ರೇಣಿ ನಿಗದಿಪಡಿಸಲು ಕಾನೂನು ಕೋಶದ ಮುಖ್ಯಸ್ಥರು ರವರ ಅಭಿಪ್ರಾಯ ಕೋರಲಾಗಿದ್ದು, ಕಾನೂನು ಕೋಶದ ಮುಖ್ಯಸ್ಥರು ರವರ ವರದಿ ಸಂಖ್ಯೆ:ಬಿಬಿಎಂಪಿ/ಎಲ್ ಸಿ/ಆರ್ಆರ್/2181/2011–12 ದಿ:11–01–2012ರಂತೆ ಈ ಕೆಳಕಂಡಂತೆ ವರದಿಯನ್ನು ನೀಡಿರುತ್ತಾರೆ.

ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುವ ನೌಕರನ್ನು ಖಾಯಂಗೊಳಿಸುವ ಬಗ್ಗೆ/ವಿಷಯದಲ್ಲಿ ಕುರಿತಂತೆ ಭಾರತ ಸರ್ವೋಚ್ಚ ನ್ಯಾಯಾಲಯದ ಆದೇಶಗಳಂತೆ ಹಾಗೂ ತೀರ್ಪಿನ/ಹಿನ್ನೆಲೆಯಲ್ಲಿ ಗುತ್ತಿಗೆ ನೌಕರರನ್ನು ಸಕ್ರಮಗೊಳಿಸುವಲ್ಲಿ ಪರಿಶೀಲಿಸಲಾಯಿತು. ಮುಂದುವರೆಸಂತೆ ದಿನಾಂಕ: 24–03–2010ರಲ್ಲಿನ ಸರ್ಕಾರದ ಪತ್ರಗಳಂತೆ ವಿವರವಾಗಿ ಪರಿಶೀಲಿಸಲಾಯಿತು.

Superme Court of India.
Appeal (Civil) 3595-3612/1999
State of Karnataka and others.
v/s
Smt. Uma Devi and others .

The operative portion of the order passed by Supreme Court of India in Civil Appeal No.3595-3612/1999 dated: 10-04-2006.

In cases relating to service in the commercial taxes department, the High Court has directed that those engaged on daily wages, be paid wages equal to the salary and allowances that are being paid to the regular employees of their cadre in government service, with effect from the dates from which they were respectively appointed. The objection taken was to the direction for payment from the dates of engagement. We find that the high court had clearly gone wrong in directing that these employees be paid salary equal to the salary and allowances that are being paid to the regular employees of their cadre in government service, with effect from the dates from which they were respectively engaged or appointed. It was not open to the high court to impose such an obligation on the state when the very question before the high court in the case was whether these employees were entitled to have equal pay for equal work so called and were entitled to any other benefit. They had also been engaged in the teeth of directions not to do so. We are, therefore, of the view that, at best, the division bench of the high court should have directed that wages equal to the salary that are being paid to regular employees be paid to these daily wage employees with effect from the date of its judgment. Hence, that part of the direction of the division bench is modified and it is directed that these daily wage earners be paid wages equal to the salary at the lowest grade of employees of their cadre in the Commercial Taxes Department in government in government services, from the date of the judgment of the division bench of the high court. Since, they are only daily wage earners there would be no question of other allowances being paid to them. In view of our conclusion, that courts are not expected to issue direction for making such persons permanent in service we set aside that part of the direction of the high court directing the government to consider their cases for regularization. We also notice that the high court has not adverted to the aspect as to whether it was regularization or it was giving permanency that was being directed by the high court. In such a situation, the direction in that regard will stand deleted and the appeals filed by the state would stand allowed to that extend. If sanctioned posts are vacant (they are said to be vacant) the state will take immediate steps for filling those posts by an regular process of selection. But when regular recruitment is undertaken, the respondents in C.A.No.3595-3612 and those in the Commercial Taxes Department similarly situated, will be allowed to compete, waiving the age restriction impose for the recruitment and giving some weightage for their having been engaged for work in the Department for a significant period of time. That would be the extent of the exercise of power by this court article 142 of the constitution to do justice to them.

Coming to Civil Appeal No. 1861-2063 of 2011, in view of our conclusion on the questions referred to, no relief can be granted, that too to an indeterminate number of members of the association. These appointments or engagement were also in the teeth of directions of the Government not to make such appointments and it is impermissible to recognize such appointments made in the teeth of directions issued by the Government in that regard. We have also held that they are not legally entitled to any such relief. Granting of the relief claimed would mean paying a premium for defiance and insubordination by those concerned who engaged these persons against the interdict in that behalf. Thus, on the whole, the appellants in these appeals are found to be not entitled to any relief. These appeals have, therefore, to be dismissed.

ಪ್ರಸ್ತಾಪಿತ ವಿಷಯದಲ್ಲಿ ಸರ್ಕಾರದ ಆದೇಶಗಳು ಹಾಗೂ ಸುತ್ತೋಲೆಗಳ ಅನ್ವಯ (1) ಸದರಿ ಅಧಿಕಾರಿ/ನೌಕರರನ್ನು ಸಕ್ರಮಗೊಳಿಸುವಲ್ಲಿ, (2) ವೇತನ ಶ್ರೇಣಿ ನಿಗಧಿ ಪಡಿಸುವ ಹಾಗೂ ಬಾಕಿ ಸೌಲಭ್ಯಗಳನ್ನು ನೀಡುವ ಕುರಿತಂತೆ ಕ್ರಮವಹಿಸುವುದು ಸಮಂಜಸವಲ್ಲವೆಂದು ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶ/ಮಾರ್ಗ ಸೂಚಿಗಳಂತೆ ಕ್ರಮವಹಿಸುವುದು ಅತ್ಯಂತ ಸೂಕ್ತ ಹಾಗೂ ಸಮಂಜಸವೆಂದು ಅಭಿಪ್ರಾಯ ನೀಡಿರುತ್ತಾರೆ.

ಈ ಮೇಲ್ಕಂಡ ವಿವರವಾದ ಅಂಶಗಳ ಹಿನ್ನೆಲೆಯಲ್ಲಿ, ಸದರಿ 6 ಮಂದಿ ಅರೆಕಾಲಿಕ ನೌಕರರು ಮನವಿ ಸಲ್ಲಿಸಿ, 1995ರಿಂದ ಪಾಲಿಕೆಯಲ್ಲಿ ಅರೆಕಾಲಿಕ ನೌಕರಿಗೆ ಮಾಹೆಯಾನ ರೂ. 1300, 1400, ಹಾಗೂ 2000 ಗಳ ಸಂಚಿತ ವೇತನವನ್ನು ಪಡೆದು 16 ವರ್ಷಗಳಿಂದ ಕೆಲಸದಲ್ಲಿ ಯಾವುದೇ ಭದ್ರತೆಯಿಲ್ಲದೇ ಕಡಿಮೆ ವೇತನದಲ್ಲಿ ಜೀವನ ನಿರ್ವಹಣೆ ಕಷ್ಟಕರವಾಗಿರುವುದರಿಂದ ನಿಯತಕಾಲಿಕ ವೇತನ ಪಾವತಿಸಲು ಕೋರಿರುವ ಸಂಬಂಧ ಸೂಕ್ತ ತೀರ್ಮಾನ ಕೈಗೊಳ್ಳಲು ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ಪ್ರಸ್ಥಾವನೆ ಕುರಿತಂತೆ ದೀರ್ಘವಾದ ಚರ್ಚೆಯ ನಂತರ ಆಯುಕ್ತರ ದಿ॥ 23.06.2012ರ ಟಿಪ್ಪಣಿಯ ರೀತ್ಯಾ ನಿಯತಕಾಲಿಕ ವೇತನ ಪಾವತಿಸಲು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ : 16.07.2012ರ ನಿರ್ಣಯ.

**–ವಿಷಯವನ್ನು ಮುಂದೂಡಲಾಯಿತು–**

## *14]. ವಿಷಯದ ಸಂಖ್ಯೆ :–ತೆಆಸ್ಥಾಸ/104/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎಲ್.ಎ.ಕ್ಯೂ/ಪಿಆರ್/ಟಿ.ನಿ.ಸಿ/01/2012–13, ದಿನಾಂಕ: 13–07–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಕ್ತ ಸಿಬ್ಬಂದಿ ಇಲ್ಲದ ಕಾರಣ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರು ಮತ್ತು ಸರ್ವೇಯರ್‌ಗಳನ್ನು ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 20 (ಎ) ರನ್ವಯ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಅವರ ಹುದ್ದೆಯ ಎದುರು ಕಾಣಿಸಿರುವ ಕ್ರೋಢೀಕೃತ ಮಾಸಿಕ ವೇತನದ (ಸಂಚಿತ ವೇತನ) ಆಧಾರದ ಮೇಲೆ ದಿನಾಂಕ: 03–03–2010 ರಂದು ಈ ಕಛೇರಿ ಆದೇಶದ ಸಂಖ್ಯೆ : ಸ.ಆ.(ಆಸ್ತಿ) ಜಿಎಲ್/2428/2009–10, ದಿನಾಂಕ : 03.03.2010, 09.04.2010, 11.05.2010, 08.06.2010 ಹಾಗೂ 04.08.2010ರನ್ವಯ ನೇಮಕ ಮಾಡಿಕೊಳ್ಳಲಾಗಿತ್ತು. ಈ ಹುದ್ದೆಗಳಿಗೆ ಸರ್ಕಾರವು, ಸರ್ಕಾರದ ಆದೇಶ ಸಂಖ್ಯೆ : ನಇ/395/ಎಂ.ಎನ್.ಯು/2009, ದಿನಾಂಕ 23.12.2009 ರಂತೆ ಅನುಮೋದನೆ ನೀಡಿದ್ದು ಅದರ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಹುದ್ದೆ | ಗೌರವಧನ/ಸಂಚಿತ ವೇತನ ರೂ. | ನೇಮಕ ಮಾಡಲಾದ ಹುದ್ದೆಗಳ ಸಂಖ್ಯೆ |
|---|---|---|---|
| 1 | ಸಹಾಯಕ ಆಯುಕ್ತರು | 16,000 | 3 |
| 2 | ತಹಶೀಲ್ದಾರ್‌ರು | 14,000 | 4 |
| 3 | ಶಿರಸ್ತೇದಾರ್‌ರು | 12,000 | 4 |
| 4 | ಕಂದಾಯ ನಿರೀಕ್ಷಕರು/ಪ್ರ.ದ.ಸ | 10,000 | 8 |
| 5 | ಮೋಜಣಿದಾರರು | 10,000 | 8 |
| 6 | ಗ್ರಾಮಲೆಕ್ಕಿಗರು/ದ್ವಿ.ದ.ಸ | 8,000 | 8 |

ಮೇಲ್ಕಂಡ ಸರ್ಕಾರದ ಆದೇಶದಂತೆ ಆಯ್ಕೆ ಪ್ರಕ್ರಿಯೆ ನಡೆಸಿ ಒಟ್ಟು 36 ಮಂದಿ ಗುತ್ತಿಗೆ ಅಧಿಕಾರಿ/ಸಿಬ್ಬಂದಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದು, ಅವರಲ್ಲಿ ಕರ್ತವ್ಯಕ್ಕೆ ಹಾಜರಾದ 32 ಮಂದಿಯನ್ನು ಬಿಬಿಎಂಪಿ ಯ 8 ವಲಯಗಳಿಗೆ ಅವಶ್ಯಕತೆಗನುಸಾರ ನಿಯೋಜನೆ ಮಾಡಲಾಗಿತ್ತು. ಅವರ ಗುತ್ತಿಗೆ ಅವಧಿಯು ದಿ: 02–03–2011 ಕ್ಕೆ ಮುಕ್ತಾಯಗೊಂಡಿದ್ದು, ವಲಯಗಳಿಂದ ಪಡೆದ ವರದಿ ಮತ್ತು ಟಿ.ಡಿ.ಆರ್ ಯೋಜನೆಯಲ್ಲಿನ ಪ್ರಗತಿ ಪರಿಶೀಲನೆ ಮಾಡಿ 2011–12 ನೇ ಸಾಲಿಗೆ ಸದರಿ ಹುದ್ದೆಗಳನ್ನು 24 ಕ್ಕೆ ಕಡಿತಗೊಳಿಸಿ ಮುಂದುವರೆಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ : ನಇ/395/ಎಂ.ಎನ್.ಯು/2009, 23.12.2009 ರಂತೆ ಸರ್ಕಾರದ ಅನುಮೋದನೆ ಪಡೆಯಲಾಗಿತ್ತು ಹಾಗೂ ಈ ಅವಧಿಯಲ್ಲಿ ಕೆಲವು ಗುತ್ತಿಗೆ ಸಿಬ್ಬಂದಿ ವೈಯಕ್ತಿಕ ಕಾರಣದ ಮೇಲೆ ರಾಜೀನಾಮೆ ನೀಡಿದ್ದು ಮತ್ತು ಕೆಲವರನ್ನು ಅವರ ಕಾರ್ಯಪ್ರಗತಿಯು ತೃಪ್ತಿಕರವಾಗಿಲ್ಲದ್ದರಿಂದ ಪಾಲಿಕೆಯಿಂದ ಬಿಡುಗಡೆಗೊಳಿಸಲಾಗಿತ್ತು. ಅದರಂತೆ 2011–12ನೇ ಸಾಲಿಗೆ ಗುತ್ತಿಗೆ ಅವಧಿಯು ಮುಕ್ತಾಯಗೊಂಡಂತೆ ಅಂದರೆ ದಿ:02–03–2012 ರಂತೆ ಪಾಲಿಕೆಯ ಭೂಸ್ವಾಧೀನ ಮತ್ತು ಟಿ.ಡಿ.ಆರ್ ವಿಭಾಗದಲ್ಲಿ ಕೇವಲ 14 ಮಂದಿ ಗುತ್ತಿಗೆ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ನಿವೃತ್ತ ಅಧಿಕಾರಿ/ನೌಕರರುಗಳ ಗುತ್ತಿಗೆ ಅವಧಿಯು ದಿ: 02–03–2012 ಕ್ಕೆ ಮುಕ್ತಾಯಗೊಂಡಿದ್ದು, ಹೊಸ ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೆ ಅಥವಾ ಕರ್ನಾಟಕ ಆರ್ಥಿಕ ಸಂಹಿತೆ ನಿಯಮ 80 (ಎ) ಈ1) ಮತ್ತು (2) ರಲ್ಲಿ ಅವಕಾಶವಿರುವಂತೆ ಮುಂದಿನ ತಿಂಗಳ ಅವಧಿಗೆ ಅಂದರೆ ದಿ: 31–05–2012 ರವರೆಗೆ ಗುತ್ತಿಗೆ ಸೇವೆಯಲ್ಲಿ ಮುಂದುವರೆಸಲಾಗಿದೆ.

ಮುಂದುವರೆದಂತೆ, ಪಾಲಿಕೆಯ ಭೂಸ್ವಾಧೀನ ಮತ್ತು ಟಿ.ಡಿ.ಆರ್ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ಕಂದಾಯ ಇಲಾಖೆಯ ನಿವೃತ್ತ ಅಧಿಕಾರಿ/ನೌಕರರು, ಸರ್ವೇಯರ್ ಗಳನ್ನು ಮರು ನೇಮಕ ಮಾಡಿಕೊಳ್ಳುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 8 ವಲಯಗಳಲ್ಲಿನ ಅಪರ/ಜಂಟಿ ಆಯುಕ್ತರುಗಳಿಂದ ವರದಿ ಪಡೆದು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯದ ಪ್ರಗತಿ ಬಗ್ಗೆ ಈ ಕೆಳಕಂಡಂತೆ ಪರಿಶೀಲನೆ ಮಾಡಲಾಗಿದೆ.

1. **ಯಲಹಂಕ ವಲಯ :–** ಈ ವಲಯದಲ್ಲಿ ಹಾಲಿ ಒಬ್ಬ ತಹಶೀಲ್ದಾರ್, ರಾನಿ/ಪ್ರ.ದ.ಸ. ಸರ್ವೇಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 7 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 3,000 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 322 ಮತ್ತು 96 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಆಶಾದಾಯಕವಾಗಿರುತ್ತದೆ. ವಲಯದ ಜಂಟಿ ಆಯುಕ್ತರು ತಮ್ಮ ವರದಿಯಲ್ಲಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ತಹಶೀಲ್ದಾರ್/ರಾನಿ/ಪ್ರ.ದ.ಸ. ಹಾಗೂ ನಿವೃತ್ತ ಸರ್ವೇಯರ್‌ನ್ನು ಮುಂದುವರೆಸುವಂತೆಯೂ ಹಾಗೂ ಹೆಚ್ಚುವರಿಯಾಗಿ ಒಬ್ಬ ನಿವೃತ್ತ ಸರ್ವೇಯರ್ ಹುದ್ದೆ ನೀಡುವಂತೆ ಕೋರಿರುತ್ತಾರೆ. ಈ ವಲಯಕ್ಕೆ ಒಬ್ಬ ತಹಶೀಲ್ದಾರ್ ಒಬ್ಬರು ಕಂದಾಯ ನಿರೀಕ್ಷಕರು ಮತ್ತು ಇಬ್ಬರು ಸರ್ವೇಯರ್‌ಗಳನ್ನು ನೇಮಕಗೊಳಿಸಬಹುದಾಗಿದೆ.
2. **ಮಹದೇವಪುರ ವಲಯ :–** ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಗ್ರಾಮ ಲೆಕ್ಕಿಗರು/ದ್ವಿ.ದ.ಸ ಸರ್ವೇಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯ ನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 11 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 4,187 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 173 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಆಶಾದಾಯಕವಾಗಿರುತ್ತದೆ. ದೂರವಾಣಿ ಕರೆ ಮಾಡಿ ಹಾಲಿ ಕರ್ತವ್ಯನಿರತ ತಹಶೀಲ್ದಾರ್/ಗ್ರಾಮ ಲೆಕ್ಕಿಗ ಹಾಗೂ ನಿವೃತ್ತ ಸರ್ವೇಯರ್‌ಗಳ ಹುದ್ದೆಗಳನ್ನು ಮುಂದುವರಿಸುವಂತೆಯೂ ಹಾಗೂ ಈ ವಲಯದಲ್ಲಿ ಒಬ್ಬ ತಹಶೀಲ್ದಾರ್, ಒಬ್ಬ ಸರ್ವೇಯರ್ ಹಾಗೂ ಒಬ್ಬ ಗ್ರಾ.ಲೆ/ದ್ವಿ..ದ.ಸ. ರವರ ಹುದ್ದೆಗಳನ್ನು ನೇಮಕಗೊಳಿಸಬೇಕಾಗಿದೆ.
3. **ದಾಸರಹಳ್ಳಿ ವಲಯ :–** ಈ ವಲಯದಲ್ಲಿ 17 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2265 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 22 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ವಲಯದ ಜಂಟಿ ಆಯುಕ್ತರು ದೂರವಾಣಿ ಮೂಲಕ ತಿಳಿಸಿದ ಮೇರೆಗೆ ಒಬ್ಬರು ರಾನಿ/ಪ್ರ.ದ.ಸ ಹಾಗೂ ಒಬ್ಬರು ಸರ್ವೇಯರ್ ಹುದ್ದೆಯನ್ನು ನೇಮಕಾತಿ ಮಾಡಿಸಿಕೊಳ್ಳಲು ಕೋರಿದ್ದಾರೆ. ಇವರಿಗೆ ಎರಡು ಸಿಬ್ಬಂದಿಗಳನ್ನು ನೀಡಬಹುದಾಗಿದೆ.
4. **ಬೊಮ್ಮನಹಳ್ಳಿ ವಲಯ** :– ಈ ವಲಯದಲ್ಲಿ 38 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, 13 ರಸ್ತೆಗಳ ಅಗಲೀಕರಣ ಕಾರ್ಯ ಕೈಗೊಂಡಿದ್ದು, ಅಂದಾಜು 314 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಈ ವಲಯದಲ್ಲಿ 14 ಡಿ.ಆರ್.ಸಿ.ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು

ಸಮರ್ಪಕವಾಗಿರುವದಿಲ್ಲ. ದೂರವಾಣಿ ಮುಖಾಂತರ ವಿಚಾರಿಸಿದ ಮೇರೆಗೆ ಹಾಲಿ ಕರ್ತವ್ಯ ನಿರತ ರಾನಿ/ಪ್ರ.ದ.ಸ ಮತ್ತು ಆಸ್ತಿ ವಿಭಾಗ ಸರ್ವೇಯರ್ ರವರೊಂದಿಗೆ ಹೊಸದಾಗಿ ಶಿರಸ್ತೇದಾರ(1) ನಿವೃತ್ತ ಸರ್ವೇಯರ್(1) ಹಾಗೂ ಗ್ರಾಮಲೆಕ್ಕಿಗ/ ದ್ವಿ.ದ.ಸ(1) ಹುದ್ದೆಗಳನ್ನು ನೇಮಕ ಮಾಡಿಸಿ ಕೊಡಲು ಕೋರಿರುತ್ತಾರೆ. ಪ್ರಸ್ತಾವನೆ ನಿರೀಕ್ಷಿಸಲಾಗಿದೆ. ಶಿರಸ್ತೇದಾರ್ ಮತ್ತು ರಾ.ನಿ/ಪ್ರ.ದ.ಸ ಗ್ರಾ.ಲೆ/ದ್ವಿ.ದ.ಸ ಹಾಗೂ ಸರ್ವೇಯರ್ ಹುದ್ದೆ ಹೊಸದಾಗಿ ನೇಮಿಸಿಕೊಡುವಂತೆ ಕೋರಿರುತ್ತಾರೆ. ಇವರಿಗೆ ನಾಲ್ಕು ಸಿಬ್ಬಂದಿಗಳನ್ನು ನೀಡಬಹುದಾಗಿದೆ.

5. **ರಾಜರಾಜೇಶ್ವರಿನಗರ ವಲಯ :–** ಈ ವಲಯದಲ್ಲಿ 17 ರಸ್ತೆಗಳನ್ನು ರಸ್ತೆ ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2265 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ 17 ಡಿ.ಆರ್.ಸಿ ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ದೂರವಾಣಿ ಕರೆ ಮೇಲೆ ಹೊಸದಾಗಿ ನೇಮಕಾತಿ ಮಾಡಿಕೊಳ್ಳಲು ನಿವೃತ್ತ ಸರ್ವೇಯರ್ ಹುದ್ದೆಯ ಜೊತೆಗೆ ಒಬ್ಬರು ತಹಶೀಲ್ದಾರ್, ಶಿರಸ್ತೇದಾರ್(1) ರಾನಿ./ಪ್ರ.ದ.ಸ.(1) ನಿವೃತ್ತಿ ಸರ್ವೇಯರ್ (1) ಗ್ರಾಮ ಲೆಕ್ಕಿಗ(1) ಹೊಸದಾಗಿ ನೇಮಕ ಮಾಡಿಸಿಕೊಡಲು ಕೋರಿದ್ದು ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ. ಆದರೆ ಈ ವಲಯಕ್ಕೆ ಒಬ್ಬ ರಾ.ನಿ/ಪ್ರ.ದ.ಸ ಹಾಗೂ ಒಬ್ಬ ಸರ್ವೇಯರ್ ಒಟ್ಟು ಎರಡು ಸಿಬ್ಬಂದಿಗಳನ್ನು ನೀಡಬಹುದಾಗಿದೆ.
6. **ಪೂರ್ವ ವಲಯ:–** ಈ ವಲಯದಲ್ಲಿ ಒಬ್ಬ ಶಿರಸ್ತೇದಾರ್, ಸರ್ವೇಯರ್ ರವರುಗಳನ್ನು ಟಿ.ಡಿ.ಆರ್/ಭೂಸ್ವಾಧೀನ ಕಾರ್ಯನಿರ್ವಹಿಸಲು ಸೂಚಿಸಿ ನಿಯುಕ್ತಿಗೊಳಿಸಲಾಗಿತ್ತು. ಈ ವಲಯದಲ್ಲಿ 24 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 1,737 ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ವಲಯದಲ್ಲಿ 26 ಡಿ.ಆರ್.ಸಿ.ಗಳನ್ನು ನೀಡಲಾಗಿದೆ. ಪ್ರಗತಿಯು ಕುಂಠಿತವಾಗಿದ್ದು, ಸಮರ್ಪಕವಾಗಿರುವುದಿಲ್ಲ. ಆದರೆ, ವಲಯ ಜಂಟಿ ಆಯುಕ್ತರಿಂದ ಬಂದಿರುವ ವರದಿ ಪ್ರಕಾರ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಶಿರಸ್ತೇದಾರ್, ನಿವೃತ್ತಿ ಸರ್ವೇಯರ್ ರವರ ಹುದ್ದೆಗಳನ್ನು ಮುಂದುವರೆಸಲು ಕೋರಿರುತ್ತಾರೆ. ಅದರಂತೆ ಹಾಲಿ ಇರುವ ಶಿರಸ್ತೇದಾರು ಮತ್ತು ಸರ್ವೇಯರ್ ರವರ ಹುದ್ದೆಯನ್ನು ಮುಂದುವರಿಸಿ ಹೊಸದಾಗಿ ಒಬ್ಬರು ಶಿರಸ್ತೇದಾರ್, ರಾ.ಲೆ/ದ್ವಿ.ದ.ಸ ಹಾಗೂ ಸರ್ವೇಯರ್ ಒಟ್ಟು ಮೂರು ಜನರನ್ನು ನೀಡಬಹುದಾಗಿದೆ.
7. **ದಕ್ಷಿಣ ವಲಯ :–** ಈ ವಲಯದಲ್ಲಿ 14 ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, 6 ರಸ್ತೆಗಳಲ್ಲಿ ಅಂದಾಜು 2,000 ಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ವಲಯದ ಅಪರ ಆಯುಕ್ತರ ವರದಿಯ ಪ್ರಕಾರ ಹಾಲಿ ಇರುವ ಹುದ್ದೆ ಕಂದಾಯ ನಿರೀಕ್ಷಕರು ಮತ್ತು ಸರ್ವೇಯರ್ ಹುದ್ದೆಗಳನ್ನು ಹಾಲಿ ಇರುವ ಹುದ್ದೆ ಕಂದಾಯ ನಿರೀಕ್ಷಕರು ಮತ್ತು ಸರ್ವೇಯರ್ ಹುದ್ದೆಗಳನ್ನು ಮುಂದುವರೆಸಲು ಕೋರಿರುತ್ತಾರೆ. ಅದರಂತೆ ಎರಡು ಹುದ್ದೆಗಳನ್ನು ಈ ವಲಯಕ್ಕೆ ನೀಡಬಹುದಾಗಿದೆ.
8. **ಪಶ್ಚಿಮ ವಲಯ :–** ಈ ವಲಯದಲ್ಲಿ ಹಲವು ರಸ್ತೆಗಳನ್ನು ಅಗಲೀಕರಣಕ್ಕಾಗಿ ಗುರುತಿಸಲಾಗಿದ್ದು, ಅಂದಾಜು 2,000 ಕ್ಕೂ ಹೆಚ್ಚಿನ ಸಂಖ್ಯೆಯ ಆಸ್ತಿಗಳನ್ನು ಟಿ.ಡಿ.ಆರ್ ಯೋಜನೆಯಲ್ಲಿ ವಶಪಡಿಸಿಕೊಳ್ಳಬೇಕಾಗಿರುತ್ತದೆ. ಇತ್ತೀಚಿನ ಪ್ರಗತಿ ವರದಿಯನ್ನು ಪರಿಶೀಲಿಸಲಾಗಿ ಈ ವಲಯದಲ್ಲಿ ಯಾವುದೇ ಡಿ.ಆರ್.ಸಿ ಗಳನ್ನು ನೀಡಲಾಗಿರುವುದಿಲ್ಲ. ಈ ವಲಯದಲ್ಲಿ ಯಾವುದೇ ಪ್ರಗತಿ ಆಗಿರುವುದಿಲ್ಲ ಹಾಗೂ ವರದಿ ಸಹ ಬಂದಿರುವುದಿಲ್ಲ, ಈಗ ಉಳಿದ ಯಾವುದೇ ನೌಕರರು ಕೆಲಸ ಮಾಡುತ್ತಿಲ್ಲವಾದ್ದರಿಂದ ಮುಂದಿನ ದಿನಗಳಲ್ಲಿ ಅವಶ್ಯಕತೆ ಉಂಟಾದಲ್ಲಿ ಬೇರೆ ವಲಯಗಳಿಂದ ನಿಯೋಜಿಸಬಹುದಾಗಿದೆ.
9. **ಕೇಂದ್ರ ಕಛೇರಿ :–** ಕೇಂದ್ರ ಕಛೇರಿಯ ಟಿ.ಡಿ.ಆರ್ ಮತ್ತು ಭೂಸ್ವಾಧೀನ ಶಾಖೆಯಲ್ಲಿ ಒಬ್ಬ ಪ್ರ.ದ.ಸ ಹಾಗೂ ಒಬ್ಬ ದ್ವಿ.ದ.ಸ/ಗ್ರಾ.ಲೆ. ರವರು ಕರ್ತವ್ಯ ನಿರ್ವಹಿಸುತ್ತಿದ್ದು, ಹಾಲಿ ಕರ್ತವ್ಯ ನಿರತ ಹುದ್ದೆಗಳನ್ನು ಮುಂದುವರೆಸಬಹುದಾಗಿರುತ್ತದೆ.

| ಕ್ರ ಸಂ | ವಲಯ | ಅಗತ್ಯತೆಯ ಅನುಸಾರ ವಲಯದ ಅಪರ/ಜಂಟಿ ಆಯುಕ್ತರು ಕೋರಿರುವ ಹುದ್ದೆಗಳು | | | | | ಒಟ್ಟು ಹುದ್ದೆ ಸಂಖ್ಯೆ |
|---|---|---|---|---|---|---|---|
| | | ತಹಶೀಲ್ದಾರ್ | ಶಿರಸ್ತೇದಾರ್ | ರಾನಿ/ಪ್ರ.ದ.ಸ | ಗ್ರಾಮ ಲೆಕ್ಕಿಗರು/ ದಿ.ದ.ಸ. | ಸರ್ವೇಯರ್ | |
| 1 | ಯಲಹಂಕ | 1 | – | 1 | – | 2 | 4 |
| 2 | ದಾಸರಹಳ್ಳಿ | – | – | 1 | – | 1 | 2 |
| 3 | ಮಹದೇವಪುರ | 1 | – | – | 1 | 1 | 3 |
| 4 | ಪೂರ್ವ | – | 1 | – | 1 | 1 | 3 |

| | | | | | | | |
|---|---|---|---|---|---|---|---|
| 5 | ಬೊಮ್ಮನಹಳ್ಳಿ | – | 1 | 1 | 1 | 1 | 4 |
| 6 | ದಕ್ಷಿಣ | – | – | 1 | – | 1 | 2 |
| 7 | ರಾ.ರಾ.ನಗರ | – | – | 1 | – | 1 | 2 |
| 8 | ಪಶ್ಚಿಮ | – | – | – | – | – | – |
| 9 | ಕೇಂದ್ರ ಕಛೇರಿ | – | – | 1 | 1 | – | 2 |
| | ಒಟ್ಟು | 2 | 2 | 6 | 4 | 8 | 22 |

ಮೇಲೆ ತಿಳಿಸಿರುವಂತೆ ಭೂಸ್ವಾಧೀನ ಹಾಗೂ ಟಿ.ಡಿ.ಆರ್. ಕಾರ್ಯನಿರ್ವಹಣೆಗಾಗಿ ಕಂದಾಯ ಇಲಾಕೆಯ ನಿವೃತ್ತ ಅಧಿಕಾರಿ/ನೌಕರರುಗಳ ಸೇವೆಯ ಪಾಲಿಕೆಗೆ ಅತ್ಯಗತ್ಯವಾಗಿಬೇಕಾಗಿದ್ದು ಪ್ರಸ್ತುತ ಇತರೆ ಸರ್ಕಾರಿ ನೌಕರರ ವೇತನವನ್ನು ಸರ್ಕಾರವು ಹೆಚ್ಚಿಸಿರುವುದರಿಂದ ಇವರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷ ಅಥವಾ ಇವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ಈ ಕೆಳಕಂಡಂತೆ ಮಾಹೆಯಾನ ಪರಿಷ್ಕೃತ ಸಂಚಿತ ವೇತನವನ್ನು ನಿಗಧಿಪಡಿಸಿ ನೇಮಕಾತಿ ಮಾಡಿಕೊಳ್ಳಲು ತೀರ್ಮಾನಿಸಲಾಗಿದೆ.

| ಕ್ರ.ಸಂ | ಹುದ್ದೆ | ಗೌರವಧನ/ಸಂಚಿತ ವೇತನ ರೂ. | ಅವಶ್ಯಕ ಹುದ್ದೆಗಳ ಸಂಖ್ಯೆ |
|---|---|---|---|
| 1 | ತಹಶೀಲ್ದಾರ್‌ರು | 16,000 | 2 |
| 2 | ಶಿರಸ್ತೇದಾರ್‌ರು | 14,000 | 2 |
| 3 | ಕಂದಾಯ ನಿರೀಕ್ಷಕರು/ಪ್ರ.ದ.ಸ | 12,000 | 6 |
| 4 | ಮೋಜಣಿದಾರರು | 12,000 | 8 |
| 5 | ಗ್ರಾಮಲೆಕ್ಕಿಗರು/ದ್ವಿ.ದ.ಸ | 10,000 | 4 |
| | ಒಟ್ಟು | | 22 |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪಾಲಿಕೆಯಲ್ಲಿ ಟಿ.ಡಿ.ಆರ್ ಮತ್ತು ಭೂಸ್ವಾಧೀನ ಕಾರ್ಯಗಳನ್ನು ನಿರ್ವಹಿಸಲು ಕಂದಾಯ ಇಲಾಖೆಯು 22 ಮಂದಿ ನಿವೃತ್ತ ಅಧಿಕಾರಿ/ನೌಕರರುಗಳನ್ನು ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಗಳ 1977 ರ ನಿಯಮ 20 (ಎ) ರನ್ವಯ ಹುದ್ದೆಯ ಕಾಣಿಸಿರುವ ಕ್ರೋಢಿಕೃತ ಸಂಚಿತ ವೇತನದ ಆಧಾರದ ಮೇಲೆ ದಿ: 01–06–2012 ರಿಂದ ಒಂದು ವರ್ಷದ ಅವಧಿಗೆ ಅಥವಾ ಅವರ ಸೇವೆಯ ಅಗತ್ಯವಿರುವ ತನಕ ಯಾವುದು ಮೊದಲೋ ಅಲ್ಲಿಯವರೆಗೆ ನೇಮಕಾತಿ ಮಾಡಿಕೊಂಡು ಅವರ ಸಂಚಿತ ವೇತನ ವೆಚ್ಚವನ್ನು ಪಾಲಿಕೆಯ 2012–13ನೇ ಸಾಲಿನ ಆಯವ್ಯಯದಲ್ಲಿ ಭರಿಸಲು ಸೂಕ್ತ ತೀರ್ಮಾನ ಕೈಗೊಳ್ಳಲು ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಸಾಮಾನ್ಯ ಸಭೆಯ ಮುಂದೆ ಈ ಕಛೇರಿ ಸಮ ಸಂಖ್ಯೆಯ ಟಿಪ್ಪಣಿ ದಿನಾಂಕ : 05–04–2012 ರಂತೆ ಟಿಪ್ಪಣಿ ಮಂಡಿಸಲಾಗಿತ್ತು.

"ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ : 14–06–2012 ರಂದು ಸಭೆಯ ನಡವಳಿಗಳ ವಿಷಯ ಸಂಖ್ಯೆ : ಸಿಆಸುಸ್ಥಾಸ/02/12–13ರ ನಡವಳಿಯಲ್ಲಿ *ಹಾಲಿ ಕಾರ್ಯನಿರ್ವಹಿಸುತ್ತಿರುವ ನಿವೃತ ನೌಕರರುಗಳ ಕಾರ್ಯವೈಖರಿ ಕುರಿತಂತೆ ಸಾಕಷ್ಟು ದೂರುಗಳಿದ್ದು, ಈ ಒಂದು ಕಾರ್ಯವನ್ನು ಪಾಲಿಕೆಯ ಖಾಯಂ ನೌಕರರುಗಳ ವೃಂದ್ಧದಿಂದ ನಿರ್ವಹಿಸಲು ಸಾಧ್ಯವಿಲ್ಲವೇ ಎಂಬ ಬಗ್ಗೆ ಸ್ಪಷ್ಟೀಕರಣನೀಡತಕ್ಕದ್ದು*". ಎಂಬುದಾಗಿ ಕಡತವನ್ನು ಹಿಂದಿರುಗಿಸಲಾಗಿರುತ್ತದೆ.

ಭೂಸ್ವಾಧೀನ/ಟಿ.ಡಿ.ಆರ್. ಕಾರ್ಯವನ್ನು ಪಾಲಿಕೆಯ ಖಾಯಂ ನೌಕರರ ವೃಂದದಿಂದ ಕಾರ್ಯನಿರ್ವಹಿಸಲು ವಾಸ್ತವಿಕ ದೃಷ್ಟಿಯಿಂದ ಸಮಂಜಸವಾಗಿರುವುದಿಲ್ಲ. ಈ ಬಗ್ಗೆ ಹಾಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ನೌಕರರುಗಳ ಕಂದಾಯ ಇಲಾಖೆ/ಸರ್ವೇ ಇಲಾಖೆಗಳಲ್ಲಿ ಸುಮಾರು 35 ರಿಂದ 40 ವರ್ಷಗಳವರೆಗಿನ ಸೇವಾ ಅವಧಿಯಲ್ಲಿ ಅಪಾರವಾದ ಅನುಭವ, ಜ್ಞಾನ, ಕುಶಲತೆ ಹಾಗೂ ಪರಿಣಿತಿ ಹೊಂದಿರುವುದರಿಂದ ಇವರುಗಳನ್ನೇ ಪಾಲಿಕೆಯ ಭೂಸ್ವಾಧೀನ/ಟಿ.ಡಿ.ಆರ್. ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಮುಂದುವರೆಸಬಹುದಾಗಿರುತ್ತದೆ. ಒಂದು ವೇಳೆ ಸದರಿ ನಿವೃತ್ತ ನೌಕರರುಗಳ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರಿಂದ ನಿರ್ದಿಷ್ಟವಾದ ದೂರುಗಳು ಬಂದಲ್ಲಿ ಕಾನೂನು ರೀತಿಯ ಕ್ರಮ ಜರುಗಿಸಲಾಗವುದೆಂದು ಸ್ಪಷ್ಟೀಕರಿಸುತ್ತಾ, ಮೇಲ್ಕಂಡ ಪ್ರಸ್ತಾವನೆಗೆ ಸೂಕ್ತ ನಿರ್ಣಯ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ

ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಸಾಮಾನ್ಯ ಸಭೆಯ ಮುಂದೆ ಮಂಡಿಸಿರುವ ಪರಿಷ್ಕೃತ ಟಿಪ್ಪಣಿಯ ಮೇರೆಗೆ, ಪ್ರಸ್ತಾವನೆಗೆ ಸಂಬಂಧಿಸಿದಂತೆ ದೀರ್ಘವಾದ ಚರ್ಚೆಯ ನಂತರ ಈ ಪ್ರಕ್ರಿಯೆ ಕುರಿತಂತೆ ಹಾಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ನೌಕರರನ್ನು ಮುಂದುವರೆಸುವ ಕುರಿತಂತೆ ಮಂಡಿಸಿರುವ ಆಯುಕ್ತರ ದಿನಾಂಕ:13/07/2012ರ ಪರಿಷ್ಕೃತ ಟಿಪ್ಪಣಿಯನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ಒಪ್ಪಿದೆ.

1. ನಿವೃತ್ತ ನೌಕರರುಗಳು ತಮ್ಮ ದೈನಂದಿನ ಕಛೇರಿ ಕಾರ್ಯ ಚಟುವಟಿಕೆಯ ದಿನಚರಿ (ಡೈರಿ)ಯನ್ನು ದಾಖಲಿಸಿ, ಬಟವಾಡೆ ಅಧಿಕಾರಿಗಳು ದೃಢೀಕರಿಸಿದ ನಂತರ ವೇತನ ಬಿಡುಗಡೆ ಮಾಡಲು ಕ್ರಮಕೈಗೊಳ್ಳತಕ್ಕದ್ದು.
2. ಸದರಿ ನಿವೃತ್ತ ನೌಕರರುಗಳು ತಮಗೆ ವಹಿಸಿರುವ ಕೆಲಸಕಾರ್ಯಗಳಲ್ಲಿ ಕರ್ತವ್ಯ ಲೋಪವೆಸಗಿ ಪಾಲಿಕೆಯ ಕೆಲಸಕಾರ್ಯಗಳಿಗೆ ನಷ್ಟ ಉಂಟಾದ ಪಕ್ಷದಲ್ಲಿ ಸದರಿರವರುಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡತಕ್ಕದ್ದು.
3. ಸದರಿ ನಿವೃತ್ತ ನೌಕರರುಗಳನ್ನು ಹೊರತುಪಡಿಸಿ ಕಛೇರಿಯ ಇತರೆ ಯಾವುದೇ ಸಿಬ್ಬಂದಿ ವರ್ಗದವರಿಂದ ಟಿ.ಡಿ.ಅರ್/ಭೂಸ್ವಾಧೀನ ಪ್ರಕ್ರಿಯೆಯ ಕೆಲಸಕಾರ್ಯಗಳನ್ನು ನಿರ್ವಹಿಸಿದ ಪಕ್ಷದಲ್ಲಿ, ಸಂಬಂಧಪಟ್ಟ ವಲಯ ಜಂಟಿ ಆಯುಕ್ತರವರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ಶಿಸ್ತಿಗೆ ಒಳಪಡಿಸ ತಕ್ಕದೆಂದು ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ : 06.08.2012ರ ನಿರ್ಣಯ.

**–ವಿಷಯವನ್ನು ಮುಂದೂಡಲಾಯಿತು–**

## *15]. ವಿಷಯದ ಸಂಖ್ಯೆ :–ತೆಆಸ್ಥಾಸ/105/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(5ಹೆಚ್)ಪಿಆರ್/57/2010–11, ದಿನಾಂಕ : 20–07–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಇದರ ಕಾರ್ಯವ್ಯಾಪ್ತಿಯು ವಿಸ್ತಾರವಾಗಿರುತ್ತದೆ. ಸುಮಾರು 225 ಚ.ಕಿ.ಮೀ ನಿಂದ 800 ಚ.ಕಿ.ಮೀಗೆ ಭೌಗೋಳಿಕ ವಿಸ್ತಾರಗೊಂಡು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯವ್ಯಾಪ್ತಿಯೂ ಸಹ ವಿಸ್ತಾರಗೊಂಡಿದ್ದು, ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸಲು ಹಾಗೂ ತೊಂದರೆಗೆ ಸಿಲುಕಿಕೊಂಡ ಕೋತಿ, ಹಾವು, ನಾಯಿ ಹಾಗೂ ಇನ್ನಿತರೆ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸಿ ಮತ್ತು ಮನುಷ್ಯರಿಂದಾಗಲಿ ಅಥವಾ ಪ್ರಾಣಿ ಪಕ್ಷಿಗಳಿಂದಾಗಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವಂತಹ ಕಾರ್ಯನಿರ್ವಹಿಸಲು ಪರಿಸರ ಸಲಹೆಗಾರರ ತಂಡವಾಗಿ ಶ್ರೀ ಶರತ್ ಬಾಬು, ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡವನ್ನು ಗುತ್ತಿಗೆ ಆಧಾರದ ಮೇಲೆ ನಿಶ್ಚಿತ ಮಾಸಿಕ ಸಂಭಾವನೆಯಲ್ಲಿ ಆಗಸ್ಟ್ 2007 ರಿಂದ ಮಾರ್ಚ್ 2012ರವರೆಗೆ ಪಾಲಿಕೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಸದರಿ ವನ್ಯಜೀವಿ ಸಲಹೆಗಾರರು 2011–12ನೇ ಸಾಲಿನಲ್ಲಿ ವನ್ಯ ಜೀವಿ ಸಂರಕ್ಷಣಾ ಸಲಹೆಗಾರರ ತಂಡದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಪಾಲಿಕೆ ವತಿಯಿಂದ (ವೈದ್ಯಕೀಯ ವೆಚ್ಚ ಹಾಗೂ ಪೆಟ್ರೋಲ್ ವೆಚ್ಚವನ್ನೊಳಗೊಂಡಂತೆ) ಈ ಕೆಳಕಂಡಂತೆ ನೀಡಲಾಗಿರುತ್ತದೆ. ಸದರಿ ವನ್ಯ ಜೀವಿ ಸಂರಕ್ಷಣಾ ಸಲಹೆಗಾರರ ತಂಡವನ್ನು ಏಪ್ರಿಲ್ 2012 ರಿಂದ ಮಾರ್ಚ್ 2013ರ ವರೆಗೆ ಹೊರಗುತ್ತಿಗೆ ಅವಧಿಯನ್ನು ಮುಂದುವರೆಸಲು ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ ವಲಯ) ರವರು ವರದಿ ಸಲ್ಲಿಸಿ ಕೋರಿರುತ್ತಾರೆ.

| ಕ್ರ.ಸಂ | ವನ್ಯ ಜೀವಿ ಸಂರಕ್ಷಣಾ ಸಲಹೆಗಾರರ ತಂಡದ ವಿವರ | 2011–12ನೇ ಸಾಲಿಗೆ ಪಾವತಿಸಲಾಗುತ್ತಿರುವ ಸಂಭಾವನೆ. |
|---|---|---|
| 1 | ಶ್ರೀ ಶರತ್‌ಬಾಬು (ಪರಿಸರ ಸಲಹೆಗಾರರು) | 16000/– |
| 2 | ಶ್ರೀ ಮಂಜುನಾಥ್ (ಪರಿಸರ ಸಲಹೆಗಾರರು) | 9000/– |
| 3 | ಶ್ರೀ ಕುಮಾರ್ (ಪರಿಸರ ಸಹಾಯಕರು) | 9000/– |
| 4 | ಶ್ರೀ ಮೋಹನ್, (ಹಿರಿಯ ಪರಿಸರ ಸಹಾಯಕರು) | 8000/– + 1000/– |
| 5 | ಶ್ರೀ ಮಹೇಶ್‌ಕುಮಾರ್. ಆರ್ (ಹಿರಿಯ ಪರಿಸರ ಸಹಾಯಕರು) | 8000/– + 1000/– |
| 6 | ಶ್ರೀ ಶಿವರಾಜ್, ಹಿರಿಯ ಪರಿಸರ ಸಹಾಯಕರು | 8000/– + 1000/– |

ಏಪ್ರಿಲ್–2012 ರಿಂದ ಮಾರ್ಚ್–2013 ರವರೆಗೆ ವನ್ಯ ಜೀವಿ ಸಲಹೆಗಾರರ ತಂಡವನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಶ್ಚಿತ ಮಾಸಿಕ ಸಂಭಾವನೆಯಲ್ಲಿ ಮುಂದುವರೆಸಲು ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ) ವಲಯ ರವರು ಕೋರಿರುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ ಮೇರೆಗೆ, ಆಯುಕ್ತರ ದಿನಾಂಕ:20/07/2012ರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ : 06–08–2012ರ ಟಿಪ್ಪಣಿ.

**ನಿರ್ಣಯ :–** **ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡವು ಇದುವರೆಗೆ ಮಾಡಿರುವ ಕೆಲಸದ ಪ್ರಗತಿಯ ವರದಿಯೊಂದಿಗೆ ಕಡತವನ್ನು ಮರುಮಂಡಿಸಬೇಕೆಂದು ಸಮಿತಿಯು ತೀರ್ಮಾನಿಸಿತು.**

## *16]. ವಿಷಯದ ಸಂಖ್ಯೆ :–ತೆಆಸ್ಥಾಸ/106/2012–13*

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(4)ಪಿಆರ್/115/2011–12, ದಿನಾಂಕ : 06–07–2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಡಾ॥ಸರೋಜಿನಿ ಕರ್ನಿಂಗ್, ಸಹಾಯಕ ಶಸ್ತ್ರಚಿಕಿತ್ಸಕರು, ಇವರನ್ನು ಸರ್ಕಾರದ ಆದೇಶದಂತೆ, ಬೆಳಗಾಂ ಮಹಾನಗರ ಪಾಲಿಕೆಯಿಂದ ಬೆಂಗಳೂರು ಮಹಾನಗರ ಪಾಲಿಕೆಗೆ 1996ರ ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆಯ 91–ಎ ಪ್ರಕರಣದಡಿಯಲ್ಲಿ ದಿನಾಂಕ:30/06/1988ರಲ್ಲಿ ವರ್ಗಾವಣೆ ಮಾಡಲಾಗಿರುತ್ತದೆ. ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರ ಜ್ಞಾಪನಾ ಪತ್ರದಂತೆ ಸದರಿಯವರ್ನು ಕರ್ತವ್ಯದ ಮೇಲೆ ಹಾಜರಾತಿ ತೆಗೆದುಕೊಂಡು ಬೆಂಗಳೂರು ಮಹಾನಗರ ಪಾಲಿಕೆಯ ಬಂಡಿಮಟ್ ಆಸ್ಪತ್ರೆಯಲ್ಲಿ ಖಾಲಿ ಇರುವ ಸಹಾಯಕ ಶಸ್ತ್ರಚಿಕಿತ್ಸಕರ ಹುದ್ದೆಗೆ ನಿಯೋಜಿಸಲಾಗಿದೆ.

ಆಯುಕ್ತರವರ ಕಛೇರಿ ಆದೇಶದಂತೆ, ಸದರಿಯವರನ್ನು 2002–03ನೇ ಸಾಲಿನ ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆ ಮಾಡಿ ದಿನಾಂಕ:10/01/2003ರಂದು ಸೇವೆಯಿಂದ ಬಿಡುಗಡೆ ಮಾಡಿ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ, ಬೆಂಗಳೂರು ಇಲ್ಲಿಗೆ ಹಾಜರಾಗಲು ಸೂಚಿಸಲಾಗಿದೆ. ಉನ್ನತ ವ್ಯಾಸಂಗವನ್ನು ಪೂರ್ಣಗೊಳಿಸಿ ದಿನಾಂಕ:20/01/2006ರಂದು ಪಾಲಿಕೆಯಲ್ಲಿ ಹಾಜರಾತಿ ಹೊಂದಿರುತ್ತಾರೆ. ಇವರ ಹಾಜರಾತಿಯನ್ನು ಪರಿಗಣಿಸಿ ವಿಲ್ಸನ್ ಗಾರ್ಡನ್ ಔಷಧಾಲಯದಲ್ಲಿ ಕಾರ್ಯನಿರ್ವಹಿಸಲು ನೇಮಿಸಲಾಗಿದೆ. ಮುಂದುವರೆದಂತೆ ಸದರಿ ವೈದ್ಯರಿಗೆ 1993 ರಿಂದ ತಹಲ್‌ವರೆವಿಗೂ ಪಾಲಿಕೆಯಲ್ಲಿ ವಾರ್ಷಿಕ ವೇತನ ಬಡ್ತಿಗಳನ್ನು ಮಂಜೂರು ಮಾಡಲಾಗಿರುತ್ತದೆ.

ಸದರಿಯವರು ದಿನಾಂಕ:17/01/2007 ರಂದು ಮನವಿ ಸಲ್ಲಿಸಿ ಪಾಲಿಕೆಯಲ್ಲಿ ಇವರ ಸೇವೆಯನ್ನು ಕ್ರಮಬದ್ಧಗೊಳಿಸಿ, ಕಾಲಮಿತಿ ವೇತನ ಬಡ್ತಿಗಳನ್ನು ಮಂಜೂರು ಮಾಡುವಂತೆ ಕೋರಲಾಗಿ ಕಛೇರಿ ಪತ್ರದಲ್ಲಿ ಸದರಿಯವರ ಮನವಿಯ ಬಗ್ಗೆ ಕೆ.ಎಂ.ಸಿ ಕಾಯ್ದೆ 1976ರ 91/ಎ ಅಧಿನಿಯಮದಂತೆ ಕ್ರಮವಹಿಸಲು ಅನುಮೋದನೆ ನೀಡಲು ಸರ್ಕಾರ ನಗರಾಭಿವೃದ್ಧಿ ಇಲಾಖೆಯ ಅಧೀನ ಕಾರ್ಯದರ್ಶಿರವರಿಗೆ ದಿನಾಂಕ:20/06/2008 ರಂದು ಪತ್ರ ಬರೆಯಲಾಗಿರುತ್ತದೆ.

ಸದರಿ ಪತ್ರಕ್ಕೆ ಸಂಬಂಧಿಸಿದಂತೆ ಸರ್ಕಾರದ ಕಾನೂನು ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಗಿ ಕಾನೂನು ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ.

"...the proposed absorption of Dr. Sarojini Karning, Asst. Surgeon now working under the hands of BBMP into the services of the BBMP is were to be made from retrospective date, i.e. from date on which she is working in Bangalore City Corporation on transfer from the Corporation of City of Belgaum, she will have to be placed in the seniority list above the Doctors who have been appointed after the date of her transfer. It is not permissible under law."

ಆದ್ದರಿಂದ ಸದರಿ ವೈದ್ಯರಿಗೆ ಮೇಲ್ಕಂಡ ಅಭಿಪ್ರಾಯವನ್ನು ತಿಳಿಸಿ, ಅವಶ್ಯಕವಿದ್ದಲ್ಲಿ ತಮ್ಮ ಪ್ರತಿಕ್ರಿಯೆಯನ್ನು ನೀಡುವಂತೆ ಅಥವಾ ಅಗತ್ಯವಿದ್ದಲ್ಲಿ ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ದಿನಾಂಕ:25/05/2011ರ ಪತ್ರದಲ್ಲಿ ತಿಳಿಸಿರುತ್ತಾರೆ. ಇದರ ವಿರುದ್ಧ ಡಾ॥ಸರೋಜಿನಿ ಕರ್ನಿಂಗ್, ಸಹಾಯಕ ಶಸ್ತ್ರಚಿಕಿತ್ಸಕರು ರವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಲ್ಲಿ ದಿನಾಂಕ:25/05/2011ರಂದು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿರವರು ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ, ಸರ್ಕಾರಕ್ಕೆ 2 ತಿಂಗಳ ಗಡವು ನೀಡಿ ನೌಕರರ ಮನವಿಯನ್ನು ಕಾನೂನಿನಡಿಯಲ್ಲಿ ಪುನರ್ ಪರಿಶೀಲಿಸುವಂತೆ ಆದೇಶಿಸಿದೆ.

ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ, ಪರಿಶೀಲಿಸಿ ಅಭಿಪ್ರಾಯ ನೀಡಲು ಕಡತವನ್ನು ಪಾಲಿಕೆಯ ಕಾನೂನು ಕೋಶದ ಮುಖ್ಯಸ್ಥರಿಗೆ ಕಳುಹಿಸಲಾಗಿ, ಸದರಿಯವರು ದಿನಾಂಕ:30/05/2012ರಂದು ನೀಡಿರುವ ವರದಿಯಲ್ಲಿ ಮಾನ್ಯ ಉಚ್ಚ

ನ್ಯಾಯಾಲಯದ ಆದೇಶದಂತೆ ಶೀಘ್ರವಾಗಿ ಅರ್ಜಿದಾರರ ಮನವಿಯನ್ನು ಪರಿಗಣಿಸಿ ಸ್ಪಷ್ಟ ಆದೇಶ ಹೊರಡಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

ಹಾಲಿ ಪಾಲಿಕೆಯಲ್ಲಿ 91 ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳಿದ್ದು 15 ಹುದ್ದೆಗಳು ಖಾಲಿ ಇರುತ್ತವೆ. ಎರವಲು ಸೇವಯ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಶಸ್ತ್ರ ಚಿಕಿತ್ಸಕರನ್ನು ಪಾಲಿಕೆಯಿಂದ ಬಿಡುಗಡೆಗೊಳಿಸಿ ಮಾತೃ ಇಲಾಖೆಗೆ ಹಿಂದಿರುಗಿಸಿದ್ದು, ಪ್ರಸ್ತುತ ಗುತ್ತಿಗೆ ಆಧಾರದ ಮೇಲೆ ರೂ.30,000/-ಗಳ ಮಾಸಿಕ ವೇತನದ ಆಧಾರದ ಮೇಲೆ ಕೆಲವು ವೈದ್ಯರನ್ನು ನೇಮಿಸಿಕೊಳ್ಳಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಡಾ॥ ಸರೋಜಿನಿ ಕರ್ನಿಂಗ್, ಸಹಾಯಕ ಶಸ್ತ್ರಚಿಕಿತ್ಸಕರು, ಬೆಳಗಾಂ ಮಹಾನಗರ ಪಾಲಿಕೆಯಿಂದ ವರ್ಗಾವಣೆ ಮೇಲೆ ದಿನಾಂಕ:06/10/1988 ರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ಪಾಲಿಕೆಯಲ್ಲಿ ಸಹಾಯಕ ಶಸ್ತ್ರಚಿಕಿತ್ಸಕರ ಹುದ್ದೆಯಲ್ಲಿ ವಿಲೀನಗೊಳಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ಪ್ರಸ್ತಾವನೆಗೆ ಸಂಬಂಧಿಸಿದಂತೆ ದೀರ್ಘವಾದ ಚರ್ಚೆಯ ನಂತರ ಹಾಲಿ ಪಾಲಿಕೆಯಲ್ಲಿ 15 ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಗಳು ಖಾಲಿ ಇದ್ದು, ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಶಸ್ತ್ರ ಚಿಕಿತ್ಸಕರನ್ನು ಪಾಲಿಕೆಯಿಂದ ಬಿಡುಗಡೆಗೊಳಿಸಿ ಮಾತೃ ಇಲಾಖೆಗೆ ಹಿಂತಿರುಗಿಸಿದ್ದು, ಹಾಲಿ ಗುತ್ತಿಗೆ ಆಧಾರದ ಮೇಲೆ ಕೆಲವು ವೈದ್ಯರನ್ನೂ ಸಹ ನೇಮಿಸಿಕೊಳ್ಳುತ್ತಿದ್ದು, ಇತ್ತೀಚಿಗೆ ಸಾಂಕ್ರಮಿಕ ರೋಗಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಆಸ್ಪತ್ರೆಗಳಿಗೆ ಸಹಾಯಕ ಶಸ್ತ್ರ ಚಿಕಿತ್ಸಕರ ಹುದ್ದೆಯು ಅತ್ಯಾವಶ್ಯಕವಾಗಿರುವುದರಿಂದ ದಿನಾಂಕ:06.07.2012ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ : 06.08.2012ರ ನಿರ್ಣಯ.

**ನಿರ್ಣಯ :- ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿ. 06-08-2012ರ ನಿರ್ಣಯವನ್ನು ಸಮಿತಿಯು ಒಪ್ಪಿತು.**

## ***ಹೆಚ್ಚುವರಿ ವಿಷಯ :-***

### ***01]. ವಿಷಯದ ಸಂಖ್ಯೆ :-ತೆಆಸ್ಥಾಸ/107/2012-13***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಉಆ(ಕಂ)ಪಿ.ಆರ್ ಃ 23 ಃ 07-08, ದಿನಾಂಕ: 16-08-2012ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ 2007ರಲ್ಲಿ 7 ಸಿ.ಎಂ.ಸಿ, 1 ಟಿ.ಎಂ.ಸಿ ಹಾಗೂ 110 ಹಳ್ಳಿಗಳು ಹೊಸದಾಗಿ ಸೇರ್ಪಡೆಯಾಗಿದ್ದು, ಸದರಿ ಪ್ರದೇಶಗಳಲ್ಲಿ ವ್ಯವಸಾಯದ ಉದ್ದೇಶಕ್ಕಾಗಿ ಉಪಯೋಗಿಸುತ್ತಿದ್ದ ಜಮೀನುಗಳನ್ನು ಇತ್ತೀಚೆಗೆ ವ್ಯವಸಾಯೇತರ ಉಪಯೋಗಕ್ಕೆ ಭೂಪರಿವರ್ತನೆ ಪಡೆದು ಸದರಿ ಪ್ರದೇಶದಲ್ಲಿನ ಆಸ್ತಿ ಮಾಲೀಕರುಗಳು ಖಾತಾ ನೋಂದಾವಣೆ ಹಾಗೂ ಕಟ್ಟಡ ನಕ್ಷೆ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸುತ್ತಿರುತ್ತಾರೆ. ಈ ಹಿಂದೆ ಇದ್ದಂತಹ ಸ್ಥಳೀಯ ಸಂಸ್ಥೆಗಳು ಅಂದರೆ ಗ್ರಾಮ ಪಂಚಾಯಿತಿಗಳು ಹಾಗೂ ನಗರಸಭೆಗಳು ನೀಡಿರುವ ಖಾತೆಗಳ ಆಧಾರದ ಮೇಲೆ ಹಲವಾರು ಕಟ್ಟಡಗಳು ಅಸ್ತಿತ್ವಕ್ಕೆ ಬಂದಿದ್ದರೂ ಅಂತಹ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವಲ್ಲಿ ಸಾರ್ವಜನಿಕರಿಂದ ಬೇಡಿಕೆ ಹೆಚ್ಚಾಗಿರುತ್ತದೆ. ಅಭಿವೃದ್ಧಿ ಹೊಂದದೆ ಇರುವ ಹೊಸ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಪಾಲಿಕೆಯ ಆದ್ಯ ಕರ್ತವ್ಯವಾಗಿರುತ್ತದೆ. ಸದರಿ ಪ್ರದೇಶಗಳಲ್ಲಿ ಪೌರ ಸೌಲಭ್ಯಗಳಿಗೆ ಸಂಬಂಧಿಸಿದಂತೆ ರಸ್ತೆಗಳ ನಿರ್ಮಾಣ, ರಸ್ತೆಗಳ ಅಗಲೀಕರಣ, ರಸ್ತೆಗಳ ಡಾಂಬರೀಕರಣ, ಸೇತುವೆಗಳ ನಿರ್ಮಾಣ, ಚರಂಡಿ ಮತ್ತು ರಾಜಕಾಲುವೆಗಳ ನಿರ್ಮಾಣ ಹಾಗೂ ದುರಸ್ತಿ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ, ಬೀದಿ ದೀಪಗಳ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಾಣ ಮಾಡಿ ಅಭಿವೃದ್ಧಿಪಡಿಸಲು ಹಾಗೂ ಹಾಲಿ ಇರುವ ಪೌರ ಸೌಲಭ್ಯಗಳನ್ನು ದುರಸ್ತಿಪಡಿಸಲು ಪಾಲಿಕೆಗೆ ಹೆಚ್ಚಿನ ಹಣ ವ್ಯಯವಾಗುತ್ತಿದ್ದು, ಆರ್ಥಿಕ ಕೊರತೆ ಉಂಟಾಗಿರುತ್ತದೆ.

ಕೆ.ಎಂ.ಸಿ ಕಾಯ್ದೆ ಅಧಿನಿಯಮ 1976 ಕಲಂ 466 ರ ಅಡಿಯಲ್ಲಿ ಈಗಾಗಲೇ ಜಾರಿಗೆ ತರಲಾಗಿರುವ ಕಲಂ 466 ಬಿ ರಂತೆ ಸುಧಾರಣಾ ವೆಚ್ಚ ನಿಯಮಗಳು 2009 ರ ಆದೇಶದಲ್ಲಿ ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳಲ್ಲಿನ ಸ್ವತ್ತುಗಳ ಮೇಲೆ ಸುಧಾರಣಾ ವೆಚ್ಚವನ್ನು ವಿಧಿಸಲು ಅವಕಾಶವಿರುತ್ತದೆ. ಆದುದರಿಂದ ಸುಧಾರಣಾ ವೆಚ್ಚವನ್ನು ಅಂದಾಜು ಮಾಡಿ ಪಾಲಿಕೆ ವ್ಯಾಪ್ತಿಯಲ್ಲಿ ವಿಧಿಸಬಹುದಾದ ಸುಧಾರಣಾ ವೆಚ್ಚದ ದರವನ್ನು ನಿಗಧಿಪಡಿಸಬೇಕಾಗಿದ್ದು ಈ ಹಿಂದೆ ದಿನಾಂಕ 29-12-2010 ರಂದು ನಡೆದ ಪಾಲಿಕೆ ಸಭೆಯಲ್ಲಿ ನಿರ್ಣಯಿಸಿದಂತೆ ವಿವಿಧ ಅಳತೆಯ ಆಸ್ತಿಗಳಿಂದ, ವಿವಿಧ ದರಗಳಲ್ಲಿ ಪ್ರತ್ಯೇಕವಾಗಿ ಚದರ ಮೀಟರ್ ಒಂದಕ್ಕೆ ರೂ.150-00 ರಿಂದ ಚದರ ಮೀಟರ್ ಒಂದಕ್ಕೆ ರೂ. 400-00 ರವರೆಗೆ ಈ ಕೆಳಕಂಡ ದರಗಳಲ್ಲಿ ಸುಧಾರಣಾ ವೆಚ್ಚವನ್ನು ಸಂಗ್ರಹಿಸಲು ಸೂಚಿಸಲಾಗಿತ್ತು. ವಿವರಗಳು ಕೆಳಕಂಡಂತೆ ಇರುತ್ತವೆ.

| ಕ್ರಮ ಸಂಖ್ಯೆ | ನಿವೇಶನದ ವಿಸ್ತೀರ್ಣ | ನಿಗಧಿಪಡಿಸಿರುವ ಸುಧಾರಣಾ ವೆಚ್ಚ |
|---|---|---|
| 1 | 1200 ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ (111.48 ಚ.ಮೀ) | **ಒಂದು ಚ.ಮೀ.ಗೆ. ರೂ. 150/- ರಂತೆ** |

| | | |
|---|---|---|
| 2 | 1200 ಚದರಡಿಗಿಂತ (111.48 ಚ.ಮೀ) ಮೇಲ್ಪಟ್ಟು 2400 ಚದರಡಿಗಳ (222.96 ಚ.ಮೀ) ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | **ಒಂದು ಚ.ಮೀ.ಗೆ. ರೂ. 200/– ರಂತೆ** |
| 3 | 2400 (222.96 ಚ.ಮೀ) ಚದರಡಿಗಿಂತ ಮೇಲ್ಪಟ್ಟು 6000 (557.41 ಚ.ಮೀ) ಚದರಡಿಗಳ ವರೆಗಿನ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | **ಒಂದು ಚ.ಮೀ.ಗೆ. ರೂ. 300/– ರಂತೆ** |
| 4 | 6000 (557.41 ಚ.ಮೀ) ಚದರಡಿಗಿಂತ ಮೇಲ್ಪಟ್ಟಿರುವ ವಿಸ್ತೀರ್ಣವುಳ್ಳ ಸ್ವತ್ತುಗಳಿಗೆ | **ಒಂದು ಚ.ಮೀ.ಗೆ. ರೂ. 400/– ರಂತೆ** |

ಈ ಮೇಲ್ಕಂಡಂತೆ ದರಗಳನ್ನು ನಿಗಧಿಪಡಿಸಿ ಆಯುಕ್ತರು ನೀಡಿರುವ ಸುತ್ತೋಲೆ ಸಂಖ್ಯೆ: ಉಆ(ಕಂ)/ಪಿಆರ್–23/07–08, ದಿನಾಂಕ : 07–02–2011ರ ಅನ್ವಯ ಪಾಲಿಕೆ ವ್ಯಾಪ್ತಿಯಲ್ಲಿ ಖಾತೆ ನೊಂದಾಯಿಸಲು ಆಸ್ತಿ ಮಾಲೀಕರುಗಳಿಂದ ಸುಧಾರಣಾ ವೆಚ್ಚವನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗಿದ್ದು ಸದರಿ ಸುತ್ತೋಲೆಯನ್ನು ಪ್ರಶ್ನಿಸಿ ಹಲವಾರು ಆಸ್ತಿ ಮಾಲೀಕರುಗಳು ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: WP No.18014/2011 (LB-BMP) c/w WP No. 36128/2011 **ಮ**ತ್ತು ಇತರರು ಸಲ್ಲಿಸಿದ್ದು, ವಿಚಾರಣೆ ನಂತರ ಘನ ಉಚ್ಛನ್ಯಾಯಾಲಯವು ದಿನಾಂಕ : 20–4–2012 ರಂದು ಆದೇಶವನ್ನು ಹೊರಡಿಸಿರುತ್ತದೆ.

***ಸದರಿ ಆದೇಶದಲ್ಲಿ***

(i) ಪಾಲಿಕೆ ವ್ಯಾಪ್ತಿಯಲ್ಲಿನ ವಿವಿಧ ಅಳತೆಯ ನಿವೇಶನಗಳಿಗೆ ವಿವಿಧ ರೀತಿಯ ದರಗಳನ್ನು ನಿಗಧಿಪಡಿಸಿರುವುದು ಸಮಂಜಸವಾಗಿಲ್ಲವೆಂದು

(ii) ನಿಗಧಿಪಡಿಸಲಾಗಿರುವ ದರಗಳು ವೈಜ್ಞಾನಿಕವಾಗಿ ಲೆಕ್ಕಾಚಾರ ಮಾಡಿಲ್ಲವೆಂದು

(iii) ಖಾತಾ ನೋಂದಾವಣೆಗಾಗಿ ಅರ್ಜಿಗಳನ್ನು ಸಲ್ಲಿಸಿದ ಮಾಲೀಕರುಗಳಿಂದ ಪೂರ್ಣ ಪ್ರಮಾಣದಲ್ಲಿ ಸುಧಾರಣಾ ವೆಚ್ಚವನ್ನು ಪಾವತಿಕೊಳ್ಳುವುದಾಗಿ ನೀಡಲಾದ ಸುತ್ತೋಲೆಯು ಕಾನೂನುಬಾಹಿರವಾಗಿರುತ್ತದೆ ಎಂಬುದಾಗಿ

(iv) ಕೆ.ಎಂ.ಸಿ ಕಾಯ್ದೆ 1976 ಕಲಂ 467 ರಲ್ಲಿ ಈಗಾಗಲೇ ಸುಧಾರಣಾ ವೆಚ್ಚವನ್ನು ಕಂತುಗಳಲ್ಲಿ ಪಾವತಿಕೊಳ್ಳಲು ಅವಕಾಶವಿದ್ದರೂ ಸಹ ಕಲಂ 466ಬಿ ಅಡಿಯಲ್ಲಿ ರಚಿಸಲಾದ ನಿಯಮದಲ್ಲಿ (ನಿಯಮ 5 ರಂತೆ) ನಿಗಧಿಪಡಿಸಲಾದ ಸುಧಾರಣಾ ವೆಚ್ಚವನ್ನು ಪಾವತಿಸಿಕೊಂಡ ನಂತರ ಖಾತೆಗಳನ್ನು ನೊಂದಾಯಿಸಲಾಗುವುದೆಂದು ತಿಳಿಸಿರುವುದು ಕಾನೂನು ಬಾಹಿರವೆಂದು

(v) ಈವರೆವಿಗೂ ಪಾವತಿಸಿಕೊಂಡಿರುವ ಅಭಿವೃದ್ಧಿ ಶುಲ್ಕದ ಹಣವನ್ನು ಸಂಬಂಧಪಟ್ಟವರಿಗೆ ಹಿಂದಿರುಗಿಸಬೇಕೆಂದು ಇಲ್ಲವಾದಲ್ಲಿ ಸದರಿಯವರಿಂದ ಪಾಲಿಕೆಗೆ ಬಾಕಿ ಇರುವ ಹಣಕ್ಕೆ ಹೊಂದಾಣಿಕೆ ಮಾಡಿಕೊಳ್ಳಬಹುದೆಂದು ಆದೇಶಿಸಿ ಸದರಿ ಮೇಲ್ಕಂಡ ಆಯುಕ್ತರ ಸುತ್ತೋಲೆಯನ್ನು ರದ್ದುಗೊಳಿಸಿ ಮತ್ತೊಮ್ಮೆ ಸುಧಾರಣಾ ವೆಚ್ಚವನ್ನು ವೈಜ್ಞಾನಿಕವಾಗಿ ಪರಿಷ್ಕರಿಸಿ ಹೊಸದರಗಳನ್ನು ನಿಗದಿಪಡಿಸಬಹುದೆಂದು ಪಾಲಿಕೆಗೆ ಅವಕಾಶ ನೀಡಿ ಆದೇಶಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೆವಿನ್ಯೂ ಬಡಾವಣೆಗಳಲ್ಲಿನ ಸ್ವತ್ತುಗಳಿಗೆ ಯಾವ ದರದಲ್ಲಿ ಸುಧಾರಣಾ ವೆಚ್ಚವನ್ನು ವಿಧಿಸಬಹುದು ಎಂಬುದರ ಬಗ್ಗೆ ಪರಿಶೀಲಿಸಿ ಅಗತ್ಯ ಶಿಫಾರಸ್ಸು ನೀಡಲು ಒಂದು ಸಮಿತಿಯನ್ನು ರಚಿಸಿದ್ದು, ನಂತರ ದಿನಾಂಕ : 21–07–2012 ರಂದು ನಡೆದ ಸಭೆಯ ನಡವಳಿಗಳಲ್ಲಿ ಮಹದೇವಪುರ, ಬೊಮ್ಮನಹಳ್ಳಿ, ಯಲಹಂಕ ಮತ್ತು ರಾಜರಾಜೇಶ್ವರಿ ನಗರ ವಲಯಗಳ ಮುಖ್ಯ ಅಭಿಯಂತರರಿಂದ ಒಂದು ಎಕರೆ ಪ್ರದೇಶಕ್ಕೆ/ಒಂದು ಚದರ ಮೀಟರ್ ವಿಸ್ತೀರ್ಣಕ್ಕೆ/ಒಂದು ಚದರಡಿ ವಿಸ್ತೀರ್ಣಕ್ಕೆ ವ್ಯವಸಾಯದ ಭೂಮಿಯನ್ನು ವ್ಯವಸಾಯೇತರ, ವಾಸದ, ವಾಣಿಜ್ಯ ಮತ್ತು ಇತರೆ ಉಪಯೋಗಗಳಿಗೆ ಉಪಯೋಗಿಸಿಕೊಳ್ಳಲು ಬಡಾವಣೆ ನಿರ್ಮಾಣಕ್ಕೆ ರಸ್ತೆಗಳ ನಿರ್ಮಾಣಕ್ಕೆ ಚರಂಡಿಗಳ ನಿರ್ಮಾಣಕ್ಕೆ ಒಳಚರಂಡಿ ವ್ಯವಸ್ಥೆ ನಿರ್ಮಿಸಲು ಬೀದಿದೀಪಗಳ ಅಳವಡಿಕೆ ಮತ್ತು ನಿರ್ವಹಣೆಗೆ ತಗಲುವ ಅಂದಾಜು ವೆಚ್ಚ ಅಂದರೆ ಘನ ಉಚ್ಚ ನ್ಯಾಯಾಲಯವು ನೀಡಿರುವ ದಿನಾಂಕ 20–4–2012ರ ಆದೇಶವನ್ನು ಗಣನೆಗೆ ತೆಗೆದುಕೊಂಡು ಸದರಿ ಸೂಚನೆಗಳಂತೆ ಪಾಲಿಕೆ ವ್ಯಾಪ್ತಿಯಲ್ಲಿರುವ ಹೊಸ ಪ್ರದೇಶಗಳಲ್ಲಿ ಒದಗಿಸಬೇಕಾಗಿರುವ ಪೌರ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ ಕಾಮಗಾರಿಗಳ ವಿವರಗಳನ್ನು ಕಾಮಗಾರಿ ಇಲಾಖೆಯ ಅಭಿಯಂತರರುಗಳಿಂದ ವಿವರಣೆ ಪಡೆದು ಪರಿಶೀಲಿಸಿ ಕೆ.ಎಂ.ಸಿ ಕಾಯ್ದೆ ಕಲಂ 466 ಎ ಅಡಿಯಲ್ಲಿ ಮಾಡಲಾಗಿರುವ ಕಾಮಗಾರಿಗಳ ಬಗ್ಗೆ ಹಾಗೂ ಮಾಡಬಹುದಾದ ಅಂದಾಜುಗಳನ್ನು ಗಮನದಲ್ಲಿಟ್ಟುಕೊಂಡು ಹಾಗೂ ಕೆ.ಎಂ.ಸಿ ಕಾಯ್ದೆ ಕಲಂ 466 ಬಿ ಅಡಿಯಲ್ಲಿ ರಚಿಸಲಾದ ನಿಯಮಗಳ ಅನುಸಾರ ಈಗಾಗಲೇ ಪಾಲಿಕೆಯು ಕೈಗೊಳ್ಳಲಾದ ಅಭಿವೃದ್ಧಿ ಕಾಮಗಾರಿಗಳು ಹಾಗೂ ಇನ್ನು ಮುಂದೆ ಕೈಗೊಳ್ಳಬಹುದಾದ ಕಾಮಗಾರಿಗಳ ಅಂದಾಜು ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಈಗಾಗಲೇ ಕಾಮಗಾರಿ ಇಲಾಖೆಯರವರು ಆಯವ್ಯಯದಲ್ಲಿ 2008–09 ರಿಂದ ಮಂಡಿಸಿರುವ ಅಂದಾಜು ವೆಚ್ಚಗಳಂತೆ ಅಂದರೆ ಹೊಸ ಪ್ರದೇಶಗಳಲ್ಲಿ ಮುಂದೆ ಕಾಮಗಾರಿಗಳನ್ನು ಕೈಗೊಳ್ಳಲು ಮಾಡಿರುವ ಅಂದಾಜು ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಅವುಗಳಲ್ಲಿನ ಕಾಮಗಾರಿಗಳಿಗೆ ಚ.ಮೀ.ಒಂದಕ್ಕೆ ಈ ಕೆಳಕಂಡಂತೆ ದರಗಳನ್ನು ಅಂದಾಜಿಸಲಾಗಿದೆ.

| ವಲಯ | (ಚ.ಮೀ ಒಂದಕ್ಕೆ) ದರ |
|---|---|
| 1. ಮಹದೇವಪುರ | ರೂ. 878–00 |
| 2. ಬೊಮ್ಮನಹಳ್ಳಿ | ರೂ. 1070–00 |
| 3. ಯಲಹಂಕ | ರೂ. 1054–00 |
| 4. ರಾಜರಾಜೇಶ್ವರಿ ನಗರ | ರೂ. 880–00 |

ಈ ಅಂದಾಜು ವೆಚ್ಚಗಳ ದರಗಳನ್ನು ಸರಾಸರಿ ಲೆಕ್ಕಾಚಾರ ಮಾಡಿದಲ್ಲಿ ಚ.ಮೀ.ಒಂದಕ್ಕೆ ರೂ. 970–00 ರಷ್ಟು ದರವನ್ನು ಅಂದಾಜು ಮಾಡಬೇಕಾಗಿರುತ್ತದೆ. ಆದರೆ ಈಗಾಗಲೇ ಈ ಹಿಂದೆ ನಿಗಧಿಪಡಿಸಲಾದ ದರಗಳಲ್ಲಿ (ಚ.ಮೀ.ಒಂದಕ್ಕೆ ರೂ.150–00 ರಿಂದ ರೂ.400–00 ರವರೆಗೆ) ಹಲವಾರು ಪ್ರಕರಣಗಳಲ್ಲಿ ಸುಧಾರಣಾ ವೆಚ್ಚವನ್ನು ಪಾವತಿಸಿಕೊಂಡಿದ್ದು, ಆಯಾ ಪ್ರದೇಶಗಳಲ್ಲಿ ಹಲವಾರು ಕೆಲಸ ಕಾರ್ಯಗಳನ್ನು 2008–09, 2009–10, 2010–11 ಮತ್ತು 2011–12 ಸಾಲುಗಳಲ್ಲಿ ಕೈಗೊಂಡಿದ್ದು ಹಾಗೂ ಈ ಹಿಂದೆ ಹಲವಾರು ಹೊಸ ವಾರ್ಡ್‌ಗಳಲ್ಲಿ ಸುಮಾರು ಶೇಕಡ 25 ರಿಂದ 40 ರಷ್ಟು ಪೌರ ಸೌಲಭ್ಯಗಳನ್ನು ಒದಗಿಸಲು ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು ಹಾಗೂ ಹೊಸ ವಾರ್ಡ್‌ಗಳಲ್ಲಿ ಶೇಕಡ 60 ರಿಂದ 75 ರಷ್ಟು ಬಾಕಿ ಕಾಮಗಾರಿಗಳು ಇರುವುದಾಗಿ ಅಂದಾಜಿಸಲಾಗಿದೆ. ಈಗಾಗಲೇ ಕಾಮಗಾರಿಗಳಿಗೆ ವೆಚ್ಚ ಮಾಡಿರುವುದನ್ನು ಪರಿಗಣಿಸಿ ಪ್ರಸ್ತಾಪಿತ ಅಂದಾಜು ದರ ಚದರ ಮೀಟರ್ ಒಂದಕ್ಕೆ ರೂ. 970–00 ರಲ್ಲಿ ಶೇಕಡ 40 ರಷ್ಟು ಕಡಿತಗೊಳಿಸಿದ ನಂತರ, ಉಳಿಕೆ ಮೊತ್ತ ಚ.ಮೀ ಒಂದಕ್ಕೆ ರೂ. 560–00 ರಂತೆ ಸಮಂಜಸವಾದ ಒಂದು ದರವನ್ನು ನಿಗಧಿಪಡಿಸಬಹುದಾಗಿದೆ ಎಂದು ಸಮಿತಿಯು ಶಿಫಾರಸ್ಸು ಮಾಡಿರುತ್ತಾರೆ.

ಈಗಾಗಲೇ ದಿನಾಂಕ : 20–4–2012 ರಂದು ಉಚ್ಚನ್ಯಾಯಾಲಯ ಸೂಚಿಸಿರುವಂತೆ ಕೆ.ಎಂ.ಸಿ ಕಾಯ್ದೆ 1976 ಕಲಂ 466 ಬಿ ಅಡಿಯಲ್ಲಿ ನಿಗಧಿಪಡಿಸಲಾದ ನಿಯಮ 5 ನ್ನು ಭಾಗಶಃ ತಿದ್ದುಪಡಿ ಮಾಡಲು ಸರ್ಕಾರವನ್ನು ಕೋರಬಹುದಾಗಿದೆ ಹಾಗೂ ನಿಗದಿಪಡಿಸಬಹುದಾದ ದರವನ್ನು ಚದರ ಮೀಟರ್ ಒಂದಕ್ಕೆ ರೂ. 550/– ಸೂಚಿಸಿ ಪಾಲಿಕೆಯ ತೀರ್ಮಾನವನ್ನು ಕೋರಬಹುದಾಗಿ ಸಮಿತಿಯು ಶಿಫಾರಸ್ಸು ಮಾಡಿರುತ್ತಾರೆ.

ಸದರಿ ನ್ಯಾಯಾಲಯದ ಆದೇಶ ದಿನಾಂಕ: 20–04–2012ರ ವಿರುದ್ಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ: 2954/2012 ವಿಚಾರಣೆ ಹಂತದಲ್ಲಿದ್ದು, ಸದರಿ ಮೇಲ್ಮನವಿಯ ಅಂತಿಮ ಆದೇಶಕ್ಕೆ ಒಳಪಟ್ಟು ಹಾಗೂ ಸರ್ಕಾರವು ಈಗಾಗಲೇ ಕಲಂ 466 ಬಿ ಅಡಿಯಲ್ಲಿ ರಚಿಸಲಾದ ನಿಯಮಾವಳಿಗೆ ಭಾಗಶಃ ತಿದ್ದುಪಡಿ ತರುವ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಪಡೆದು, ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದಾಗಿದ್ದು, ಅದರಂತೆ ಸರ್ಕಾರದ ಅಂತಿಮ ತೀರ್ಮಾನಕ್ಕೆ ಒಳಪಡಿಸಿ ಪಾಲಿಕೆಯಲ್ಲಿ ಸುಧಾರಣಾ ವೆಚ್ಚ ಸಂಗ್ರಹಣೆಗಾಗಿ ಹೊಸದರಗಳನ್ನು ಜಾರಿಗೆ ತರಲು ಹಾಗೂ ಕೆ.ಎಂ.ಸಿ ಕಾಯ್ದೆ 1976 ಕಲಂ 467 ರ ಅಡಿಯಲ್ಲಿ ಮಾಡಲಾಗಿರುವ ನಿಯಮಗಳಂತೆ ಸುಧಾರಣಾ ವೆಚ್ಚವನ್ನು ಕಂತುಗಳ ಮೂಲಕ ಪಾವತಿಸಿಕೊಳ್ಳಲು ಆಯುಕ್ತರವರಿಗೆ ನೀಡಿರುವ ಅಧಿಕಾರವನ್ನು ಚಲಾಯಿಸಿ ಆಸ್ತಿ ಮಾಲೀಕರುಗಳಿಂದ ಸುಧಾರಣಾ ವೆಚ್ಚವನ್ನು ಪಾವತಿಸಿಕೊಳ್ಳಬಹುದೆಂಬುದಾಗಿ ಸಮಿತಿಯು ಶಿಫಾರಸ್ಸು ಮಾಡಿರುತ್ತಾರೆ. ಸದರಿ ಶಿಫಾರಸ್ಸುಗಳನ್ನು ಒಪ್ಪಬಹುದಾಗಿರುತ್ತದೆ.

ಸದರಿ ಸಮಿತಿಯ ದಿನಾಂಕ : 21–7–2012ರ ನಡವಳಿಕೆಗಳ ಪ್ರತಿಯನ್ನು ಕಡತದಲ್ಲಿ ಮಂಡಿಸಲಾಗಿದೆ.

ಸಮಿತಿಯ ಶಿಫಾರಸ್ಸುಗಳನ್ನು ಪರಾಮರ್ಶಿಸಲು ಹಾಗೂ ಸುಧಾರಣಾ ವೆಚ್ಚಗಳ ದರವನ್ನು ನಿಗಧಿಪಡಿಸಿ ಪಾಲಿಕೆ ವ್ಯಾಪ್ತಿಯಲ್ಲಿ ಸುಧಾರಣಾ ವೆಚ್ಚವನ್ನು ಸಂಗ್ರಹಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :- ಆಯುಕ್ತರ ದಿ. 16–08–2012ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿತು.**

**ಮುನೀಂದ್ರ ಕುಮಾರ್.ಕೆ.ಎ**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**